ಸಾಹಿತ್ಯವಾಹಿನಿ-೧೪

ಮಧ್ವಾಚಾರ್ಯರು

ಡಿ. ವಿ. ರಾಘವೇಂದ್ರ

ಡಿ. ವಿ. ಕೆ. ಮೂರ್ತಿ
ಕೃಷ್ಣಮೂರ್ತಿಪುರಂ : : ಮೈಸೂರು-೪

ಸಾಹಿತ್ಯವಾಹಿನಿ–೧೪

ಮಧ್ವಾಚಾರ್ಯರು

ಡಿ. ವಿ. ರಾಘವೇಂದ್ರ ಬಿ.ಎಸ್‌ಸಿ., ಎಸ್.ಡಿ.ಕಾಂ.

ಡಿ. ವಿ. ಕೆ. ಮೂರ್ತಿ
ಕೃಷ್ಣಮೂರ್ತಿಪುರಂ : : ಮೈಸೂರು-೪

ಮೊದಲ ಮುದ್ರಣ : ೧೯೭೧

ಬೆಲೆ : ಐವತ್ತು ಪೈಸೆ

ಮುದ್ರಕರು :

ಜಿ. ಎಚ್. ರಾಮರಾವ್
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
ಮೈಸೂರು

ಮಧ್ವಾಚಾರ್ಯರು

ಮಾಯಾವಾದದ ಮೇಲ್ಮೈಯಲ್ಲಿ ಮರೆಯಾಗಿದ್ದ ಪರಂಪರಾಗತ 'ತತ್ತ್ವವಾದ'ವನ್ನು ಪುನಃ ಪ್ರತಿಷ್ಠೆಗೊಳಿಸಿ ಪ್ರಮಾಣ ಪ್ರಮಿತವಾದ ಸಿದ್ಧಾಂತವನ್ನು ಘೋಷಿಸಿದ ಶ್ರೀಮನ್ಮಧ್ವಾಚಾರ್ಯರು ಹದಿಮೂರನೆಯ ಶತಮಾನದಲ್ಲಿ ಉಡುಪಿಗೆ ಸಮೀಪದ ಪಾಜಕ ಕ್ಷೇತ್ರದಲ್ಲಿ ಅವತರಿಸಿದ ಬಹುಮುಖ ಪ್ರತಿಭೆಯ ದಾರ್ಶನಿಕರು. ಸೂತ್ರಪ್ರಾಯವಾದ ಇವರ ಗ್ರಂಥಗಳಲ್ಲಿ ಬಹ್ವರ್ಥವನ್ನು ಪ್ರಕಾಶಪಡಿಸಿ ಟೀಕಾಚಾರ್ಯರೆಂದು ಪ್ರಸಿದ್ಧರಾದ ಜಯತೀರ್ಥರು ತಮ್ಮ 'ನ್ಯಾಯಸುಧೆ'ಯಲ್ಲಿ, "........ಶುದ್ಧಂ ಪ್ರಮಾಣಂ ಸ ಮೇ। ಭೂಯಾತ್ತತ್ತ್ವವಿನಿರ್ಣಯಾಯ ಭಗವಾನಾನಂದತೀರ್ಥೋ ಮುನಿಃ ||" ಎಂದು ತತ್ತ್ವನಿರ್ಣಯಕ್ಕೆ ಆನಂದತೀರ್ಥಭಗವತ್ಪಾದರಾದ ಮಧ್ವರೇ ಶುದ್ಧವಾದ ಪ್ರಮಾಣರೂಪರಾಗಿದ್ದಾರೆ ಎನ್ನುತ್ತಾರೆ. ಯಥಾರ್ಥಜ್ಞಾನಕ್ಕೆ ಸಾಧನವಾದುದು ಪ್ರಮಾಣ. ಅಂದರೆ, ಎಲ್ಲ ಯಥಾರ್ಥಜ್ಞಾನಗಳಿಗೆ ಕರಣವೆನಿಸಿರುವ ಮನಸ್ಸು ಮುಂತಾದವುಗಳಲ್ಲಿರುವ ಶಕ್ತಿಯನ್ನು ಸರ್ವತೋಮುಖವಾಗಿ ಉದ್ಬೋಧಗೊಳಿಸುವುದರಿಂದ ಮಧ್ವಾಚಾರ್ಯರೇ ಮುಖ್ಯವಾಗಿ ಪ್ರಮಾಕರಣ—ಪ್ರಮಾಣವೆನಿಸಿಕೊಳ್ಳುತ್ತಾರೆ ಎಂಬುದು ಟೀಕಾಚಾರ್ಯರ ಅಭಿಪ್ರಾಯ. ವಾದಿರಾಜತೀರ್ಥರು 'ಯುಕ್ತಿಮಲ್ಲಿಕಾ' ಗ್ರಂಥದಲ್ಲಿ, "ಅಂತೇ ಸಿದ್ಧಸ್ತು ಸಿದ್ಧಾಂತೋ ಮಧ್ವಸ್ಯಾಗಮ ಏವ ಹಿ। ನಿರ್ಣೇತುಂ ಶಕ್ಯತೇ ಯುಕ್ತಾಯುಕ್ತಪಕ್ಷವಿಮರ್ಶಿಭಿಃ ||" ಎಂದು ಜೈನ ಬೌದ್ಧ ಅದ್ವೈತ ವಿಶಿಷ್ಟಾದ್ವೈತ ಮುಂತಾದ ದರ್ಶನಗಳ ಪ್ರಚಾರವ್ಯಾಪ್ತಿಯಾದ ಮೇಲೆ ಬಂದ ಮಧ್ವಸಿದ್ಧಾಂತವು ಪೂರ್ವ

ಪಕ್ಷಗಳ ಯುಕ್ತಾಯುಕ್ತತೆಯನ್ನು ವಿಮರ್ಶಿಸಿ ತರ್ಕವರಿಂದ ಕೊನೆಗೆ ನಿರ್ಣಯಿಸಲ್ಪಟ್ಟ ಸಿದ್ಧಾಂತವಾಗಿ ಆದರಣೀಯವಾಗಿದೆ ಎನ್ನುವ ಮತವನ್ನು ಸೂಚಿಸುತ್ತಾರೆ.

ತತ್ತ್ವವಾದ

"ಬ್ರಹ್ಮ ಒಂದೇ ತತ್ತ್ವವು, ಜಗತ್ತು ಮಿಥ್ಯೆ" ಎಂಬುದಾಗಿ ಪ್ರತೀತವಾಗುವ ಸಿದ್ಧಾಂತಕ್ಕೆ ವಿರುದ್ಧವಾಗಿ ಜಗತ್ತು ಸತ್ಯವು, ಮಿಥ್ಯೆಯಲ್ಲವೆಂಬ ಸಿದ್ಧಾಂತವನ್ನು 'ತತ್ತ್ವವಾದ' ಎಂದು ನಿರ್ದೇಶಿಸಿದ್ದಾರೆ :—

"ಇತಿ ಸರ್ವಜ್ಞ ಮುನಿನಾ ಮಾಯಾವಾದತಮೋಽಖಿಲಂ |
ನಿರಸ್ತಂ ತತ್ತ್ವವಾದೇನ ಸತಾಂ ಸಂಶಯಸುತ್ತಯೇ ||"

—(ಮಾಯಾವಾದ ಖಂಡನ, ಉಪಾಂತ್ಯಶ್ಲೋಕ)

ಪ್ರತ್ಯಕ್ಷಾದಿ ಪ್ರಮಾಣಗಳಿಂದ ಸಿದ್ಧವಾಗಿರುವ ಪ್ರಪಂಚವನ್ನು ಸುಳ್ಳೆಂದು ಹೇಗೆ ತಾನೆ ಹೇಳುವುದು ? ಪ್ರಪಂಚದ ವೈಶಿಷ್ಟ್ಯಗಳನ್ನು ಅರ್ಥಮಾಡಿಕೊಳ್ಳಲು ಅಸಾಧ್ಯವಾದಾಗ ಆಶ್ಚರ್ಯ ಸೂಚಿಸುವ ಗುಂಪು ನಮ್ಮದಾದರೆ, ವೈಜ್ಞಾನಿಕ ಮಾರ್ಗದ ಸತ್ಯಾನ್ವೇಷಕರು ಹೇಳುತ್ತಾರೆ : ಈ ಜಗತ್ತು ನೂರಾರು ಕ್ರಮಬದ್ಧ ನಿಯಮಗಳಿಂದ ಸಾಗುತ್ತಿರುವಾಗ ಮಿಥ್ಯೆಯೆನ್ನುವ ವಾದ ಸರಿಯಲ್ಲ. ಇನ್ನು ನಮಗೆ ಗೋಚರಿಸದ ಅತೀಂದ್ರಿಯ ವಸ್ತುವನ್ನು ತಿಳಿಯಲು ಆಗಮವೇ ಪ್ರಮಾಣ. ಪ್ರಪಂಚಕ್ಕಿಂತ ಭಿನ್ನವಾದ ಪರವಸ್ತುವನ್ನು ಅದು ವಿವೇಚಿಸುತ್ತದೆ :—

ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ।
ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ ॥

—(ಗೀತಾ-15-17)

ಭಾರತದ ಉದ್ಯೋಗ ಪರ್ವದಲ್ಲಿ,

ಏಕತೋ ವಾ ಜಗತ್ಕೃತ್ಸ್ನಮೇಕತೋ ವಾ ಜನಾರ್ದನಃ ।
ಸಾರತೋ ಜಗತಃ ಕೃತ್ಸ್ನಾದತಿರಿಕ್ತೋ ಜನಾರ್ದನಃ ॥
ಭಸ್ಮ ಕುರ್ಯಾಜ್ಜಗದಿದಂ ಮನಸೈವ ಜನಾರ್ದನಃ ।
ನ ತು ಕೃತ್ಸ್ನಂ ಜಗಚ್ಛಕ್ತಂ ಕಿಂಚಿತ್ಕರ್ತುಂ ಜನಾರ್ದನೇ ॥

ಒಂದು ಕಡೆ ಸರ್ವಜಗತ್ತನ್ನೂ ಮತ್ತೊಂದು ಕಡೆ ಪರಮಾತ್ಮನಾದ ಕೃಷ್ಣನನ್ನೂ ತೂಗಿನೋಡುವಂತಾದರೆ, ಕೃಷ್ಣನು ಇಡೀ ಜಗತ್ತಿಗಿಂತ ಅತ್ಯುತ್ತಮನೂ ಭಿನ್ನನೂ ಆಗಿರುವನು. ಈ ಜಗತ್ತನ್ನು ತನ್ನ ಇಚ್ಛೆಯಿಂದಲೇ ಭಸ್ಮಮಾಡಬಲ್ಲ; ಸರ್ವಜಗತ್ತಾದರೋ ಒಟ್ಟುಗೂಡಿದರೂ ಪರಮಾತ್ಮನನ್ನು ಸ್ವಲ್ಪವೂ ಅಲುಗಾಡಿಸಲಾರದು.

ಪ್ರಕೃಷ್ಟವಾದ ಪಂಚವಿಧ ಭೇದದಿಂದ ತುಳುಕುತ್ತಿರುವ ಪ್ರಪಂಚ (ಪ್ರಕೃಷ್ಟಃ ಪಂಚವಿಧೋ ಭೇದಃ ಪ್ರಪಂಚಃ) ವನ್ನು ವಿಭಜಿಸಿ ವಿಶ್ಲೇಷಿಸಿ ಮಾನವಸಮುದಾಯ ಮುನ್ನುಗ್ಗುತ್ತಿದ್ದರೂ ಮುಖ್ಯಗುರಿಯನ್ನು ಮುಟ್ಟಲು ಅಸಾಧ್ಯವಾಗಿದೆ. ವಿಜ್ಞಾನ ಬೆಳಕಿನಂತ ನೆಲೆಯಿಂದ ಭೌತಾತೀತ ಅಧ್ಯಾತ್ಮಶಾಸ್ತ್ರವೇ ನಮಗೆ ಮಾರ್ಗದರ್ಶಕವಾಗಿ ನಿಲ್ಲುವಂಥದ್ದು. ವೈವಿಧ್ಯ ವೈಭವದಿಂದ ಕೂಡಿರುವ ಈ ಪ್ರಪಂಚದಲ್ಲಿ ನಾನಾಬಗೆಯ ಅನುಭವಗಳು ವಿಚಿತ್ರವಾಗಿವೆ. ಒಂದಕ್ಕೊಂದು ಪೂರಕವಾಗಿಯೊ ನಿಯಾಮಕವಾಗಿಯೊ ಆಶ್ರಿತವಾಗಿಯೋ ಇರುವ ತತ್ತ್ವದಿಂದ ನಾವು ಪ್ರತಿಕ್ಷಣದಲ್ಲೂ ಉಪಕೃತರಾಗುತ್ತಿದ್ದೇವೆ. ಪ್ರತ್ಯಕ್ಷಸಿದ್ಧವಾದ ಈ ವಸ್ತುಗಳು ಸ್ವತಂತ್ರವೊ ಅಸ್ವತಂತ್ರವೊ ? ಸೂಕ್ಷ್ಮವಾಗಿ ಪರಿಶೀಲಿಸಿನೋಡಿದರೆ ಎಲ್ಲಕ್ಕೂ ಪೂರ್ಣಸ್ವಾತಂತ್ರ್ಯವನ್ನು ಕೊಡಲು ನಾವು ಹಿಂಜರಿಯಲೇ

ಬೇಕಾಗುತ್ತದೆ. ಹಾಗೆಂದು ಒಂದಕ್ಕೊಂದು ಒಂದೇ ಮಟ್ಟದಲ್ಲಿ ಅಧೀನವಾಗಿಯೇ ಇದೆಯೆಂದು ಹೇಳಲೂ ಬಾರದು. ಒಂದಕ್ಕೆ ಮತ್ತೊಂದು ಸ್ವತಂತ್ರ ನಿಯಮವೆನಿಸಿ ಪರಸ್ಪರ ಸಂಬಂಧವನ್ನು ನಿಯಂತ್ರಿಸಿರುವುದರಿಂದಲೇ ಪ್ರಪಂಚದಲ್ಲಿ ಅಸ್ತವ್ಯಸ್ತತೆಯಿಲ್ಲದಿರುವುದು. ಹಾಗಾದರೆ ಪೂರ್ಣಸ್ವಾತಂತ್ರ್ಯವಿರುವ ಅಲೌಕಿಕ ಸತ್ಯವಸ್ತುವೊಂದು ಪ್ರಪಂಚದ ಸತ್ಯತ್ವಕ್ಕೆ ಕಾರಣವಾಗಬೇಕಾಗುತ್ತದೆ. ಅದೇ ಪರವಸ್ತು ; ಪರಮಾತ್ಮ.

ಮಧ್ವಾಚಾರ್ಯರು ತಮ್ಮ 'ತತ್ತ್ವಸಂಖ್ಯಾನ' ಗ್ರಂಥದ ಪ್ರಾರಂಭದಲ್ಲೇ ಹೇಳುತ್ತಾರೆ :—

"ಸ್ವತಂತ್ರಂ ಅಸ್ವತಂತ್ರಂ ಚ ದ್ವಿವಿಧಂ ತತ್ತ್ವಮಿಷ್ಯತೇ"

ತತ್ತ್ವಗಳಲ್ಲಿ ಸ್ವತಂತ್ರ, ಅಸ್ವತಂತ್ರ ಎಂಬ ಎರಡು ವಿಧವನ್ನು ಪ್ರಾಮಾಣಿಕರು ಒಪ್ಪುವಂಥದ್ದು.

ತತ್ತ್ವ ಎಂದರೇನು ?

"ತತ್ತ್ವಮನಾರೋಪಿತಂ । ಪ್ರಮಿತಿವಿಷಯ ಇತಿ ಯಾವತ್ ।
ತೇನ ತಸ್ಯ ಭಾವಸ್ತತ್ತ್ವಮಿತ್ಯಾದಿ ಖಂಡನಾನವಕಾಶಃ ।"

—(ತತ್ತ್ವಸಂಖ್ಯಾನ ಟೀಕಾ)

ಆರೋಪಿತವಲ್ಲದ್ದು ತತ್ತ್ವ. ಇಲ್ಲದುದನ್ನು ಇದೆ ಎಂದುಕೊಳ್ಳುವ ಭ್ರಾಂತಿಜ್ಞಾನವೇ ಆರೋಪಿತಜ್ಞಾನ. ತತ್ತ್ವವು ಪ್ರಮಿತಿವಿಷಯವಾಗಿದೆ ; ಎಂದರೆ ಯಥಾರ್ಥಜ್ಞಾನಕ್ಕೆ ವಿಷಯವಾದುದು. 'ತತ್ತ್ವ' ಶಬ್ದವನ್ನು ಅಖಂಡವಾಗಿ ಪ್ರಯೋಗಿಸುವುದರಿಂದ, 'ತಸ್ಯ ಭಾವಃ ತತ್ತ್ವಂ', ಎಂದು ನಿಷ್ಪತ್ತಿಮಾಡುವುದು ಸರಿಯಲ್ಲ ; ಏಕೆಂದರೆ ಯಾವುದೇ ವಸ್ತುವಿನ ಸ್ವರೂಪವನ್ನೊ ಅಥವಾ ಭಾವವನ್ನೊ ಪೂರ್ವಪರಾಮರ್ಶೆಯಿಂದ ನಿರೂಪಿಸಲು ಆಚಾರ್ಯರು ಹೊರಡದೆ ಇಡೀ ಬ್ರಹ್ಮಾಂಡದ ಸಮಷ್ಟಿದೃಷ್ಟಿಯಲ್ಲಿರುವುದು

ಅಸ್ವತಂತ್ರತತ್ತ್ವ ಹಾಗೂ ಇದರ ಚಾಲಕಶಕ್ತಿಯಾಗಿರುವ ಸ್ವತಂತ್ರ ತತ್ತ್ವ ಪರಮಾತ್ಮನೊಬ್ಬನೇ ಎಂದು ಎರಡೇ ತತ್ತ್ವಗಳನ್ನು 'ಅನಾರೋಪಿತಂ ತತ್ತ್ವಂ' ಎನ್ನುವ ಅರ್ಥದಲ್ಲಿ ಪ್ರಯೋಗಿಸಿದ್ದಾರೆ. ಅನಾರೋಪಿತವಾದುದು ಸತ್ಯವೇ ಆಗಿದೆ. ಸತ್ಯವೆಂದರೆ ಅಸ್ತಿತ್ವ. ಅಸ್ತಿತ್ವದಲ್ಲೇ ಇಲ್ಲದಿರುವುದನ್ನು ಆರೋಪಿಸಲು ಸಾಧ್ಯವಿಲ್ಲವಷ್ಟೆ! ಪ್ರಮಿತಿವಿಷಯವೇ ತತ್ತ್ವದ ಲಕ್ಷಣ.

ಅಪಾರ ಸಂಘಟನೆಯ ಚಿತ್ರಮಯ ಜಗತ್ತಿನಲ್ಲಿ ಸುಭದ್ರ ವ್ಯವಸ್ಥೆಯ ಕಡೆಗೇ ವಾಲುವಂಥ ಪ್ರಕೃತಿನಿಯಮಗಳು ವಿಜ್ಞಾನಿಗಳಿಂದ ಪರಿಷ್ಕರಿಸಲ್ಪಟ್ಟಿವೆ. ಇದರಿಂದ ಪರಿಮಿತ ಸ್ವಾತುತ್ರ್ಯದ ಅಂಶಗಳು ಹೊರಬೀಳುತ್ತಲಿವೆ. ಯಾವುದೇ ವಸ್ತುವು ತನ್ನ ಸ್ವರೂಪ, ಜ್ಞಾನ ಹಾಗೂ ಪ್ರವೃತ್ತಿಗೆ ಮತ್ತೊಂದು ವಸ್ತುವನ್ನೇ ಅವಲಂಬಿಸಿದೆ. ಕೊನೆಯ ಹಂತದಲ್ಲಿ ಒಂದು ಸ್ವತಂತ್ರ ತತ್ತ್ವಕ್ಕೆ ಪ್ರಪಂಚದ ಪರಸ್ಪರ ಎಲ್ಲ ವಸ್ತುಗಳೂ ಅಧೀನವಾಗಿರಬೇಕಾಗುತ್ತದೆ. ಇಂಥ ಸ್ವತಂತ್ರ ತತ್ತ್ವವನ್ನೇ ಆಚಾರ್ಯರು ಪರಮಾತ್ಮನಿಗೆ ಅನ್ವಯಿಸಿರುವುದು. ಪರಮಾತ್ಮನು ಎಷ್ಟು ಸತ್ಯನೋ ಪರತಂತ್ರ ತತ್ತ್ವವಾದ ಪ್ರಪಂಚವೂ ಅಷ್ಟೇ ಸತ್ಯವಾದುದು; 'ಯಾದೃಶಂ ಬ್ರಹ್ಮಣಸ್ಸತ್ತ್ವಂ ತಾದೃಶಂ ಸ್ಯಾಜ್ಜಗತ್ಯಪಿ'—(ನ್ಯಾಯಾಮೃತ.)

ಇನ್ನು ಈ ಪ್ರಪಂಚವು ಚೇತನ-ಅಚೇತನ, ಭಾವ-ಅಭಾವ, ನಿತ್ಯ-ಅನಿತ್ಯ-ನಿತ್ಯಾನಿತ್ಯ ಮುಂತಾದ ಪ್ರಭೇದಗಳಿಂದ ಕೂಡಿ ಮತ್ತೆ ವಿಭಾಗವಾಗಿರುವುದನ್ನು ಆಚಾರ್ಯರ 'ತತ್ತ್ವಸಂಖ್ಯಾನ' ಗ್ರಂಥದಲ್ಲಿ ವಿಸ್ತಾರವಾಗಿ ನೋಡಬಹುದು. ಇಂಥ ಜಗತ್ತಿನ ಜ್ಞಾನವಾಗದ ಹೊರತು ಜಗತ್ತಿನ ಸೃಷ್ಟ್ಯಾದಿಕರ್ತನಾದ ಪರಮಾತ್ಮನ ಜ್ಞಾನವಾಗುವುದು ಅಸಂಭವ.

"ಯ ಏತತ್ ಪರತಂತ್ರಂ ತು ಸರ್ವಮೇವ ಹರೇಃ ಸದಾ ।
ವಶಮಿತ್ಯೇವ ಜಾನಾತಿ ಸಂಸಾರಾನ್ಮುಚ್ಯತೇ ಹಿ ಸಃ ॥"

—(ತತ್ತ್ವವಿವೇಕ)

ಪರಮಾತ್ಮನಿಂದ ಈ ಪ್ರಪಂಚವು ನಿಯಮ್ಯವಾಗಿದೆ. ಪರಮಾತ್ಮನಾದ ಹರಿಯು ಸರ್ವೋತ್ತಮತ್ವ ಜ್ಞಾನದಿಂದ ಭಕ್ತಿಪ್ರಸಾದಗಳು ಹುಟ್ಟಿ ಮೋಕ್ಷವೆಂಬ ಸ್ವರೂಪಾನಂದಾನುಭವವು ಉಂಟಾಗುತ್ತದೆ. ಆದ್ದರಿಂದಲೇ ಮುಮುಕ್ಷುಗಳಿಗಾಗಿ ಬರೆಯುತ್ತಿರುವ ಆಚಾರ್ಯರು ಮೊದಲು ಸ್ವತಂತ್ರ ತತ್ತ್ವವನ್ನು ನಿರೂಪಿಸಿದ್ದು.

ಇಂಥ ಸ್ವತಂತ್ರ ತತ್ತ್ವವೊಂದನ್ನು ತಿಳಿಯುವುದರಿಂದ ಎಲ್ಲವೂ ತಿಳಿಯುವುದು ; 'ಏಕವಿಜ್ಞಾನೇನ ಸರ್ವವಿಜ್ಞಾನಂ' ಎಂಬ ಛಾಂದೋಗ್ಯೋಪನಿಷತ್ತಿನ ಅಭಿಪ್ರಾಯವನ್ನು ಸಮರ್ಥರೀತಿಯಲ್ಲಿ ಪ್ರತಿಪಾದಿಸುತ್ತಾ ಆಚಾರ್ಯರು ಹೇಳುತ್ತಾರೆ :—

"ಏಕವಿಜ್ಞಾನೇನ ಸರ್ವವಿಜ್ಞಾನಂ ಚ, ಪ್ರಾಧಾನ್ಯಾತ್, ಕಿಂಚಿತ್ಸಾದೃಶ್ಯಾತ್, ಕಾರಣತ್ವಾಚ್ಚ । ನ ತು ತದನ್ಯಸ್ಯ ಮಿಥ್ಯಾತ್ವಾತ್ । ನ ಹಿ ಸತ್ಯಜ್ಞಾನೇನ ಮಿಥ್ಯಾಜ್ಞಾನಂ ಭವತಿ ॥"

—(ವಿಷ್ಣುತತ್ತ್ವನಿರ್ಣಯ)

ಒಂದರ ಜ್ಞಾನದಿಂದ ಸರ್ವವಿಜ್ಞಾನವಾಗುವುದೆಂದರೆ ಜಗತ್ತಿಗಿಂತ ಬ್ರಹ್ಮನ ಪ್ರಾಧಾನ್ಯವಿರುವುದರಿಂದ ಅಥವಾ ಚೇತನತ್ವ ಮೊದಲಾದ ಕಿಂಚಿತ್ಸಾದೃಶ್ಯವಿರುವುದರಿಂದ ಅಥವಾ ಜಗತ್ತನ್ನು ಕುರಿತು ಬ್ರಹ್ಮನಿಗೆ ನಿಮಿತ್ತ ಕಾರಣತ್ವವಿರುವುದರಿಂದ, ಬ್ರಹ್ಮವ್ಯತಿರಿಕ್ತವಾದ ಜಗತ್ತಿಗೆ ಮಿಥ್ಯಾತ್ವ ಹೇಳುವುದಾದರೆ ಸರ್ವವಿಜ್ಞಾನವು ಹೇಗೆ ಹೊಂದೀತು? ಸತ್ಯಜ್ಞಾನದಿಂದ ಮಿಥ್ಯಾಜ್ಞಾನವು ಆಗುವುದಿಲ್ಲ. ಆದ್ದರಿಂದ 'ಏಕಮೇವಾದ್ವಿತೀಯಂ' ; ಬ್ರಹ್ಮನನ್ನು ವಿವೇಚಿಸುವಾಗ ಬ್ರಹ್ಮನಿಗಿಂತ ಸಮರಿಲ್ಲ ಎಂಬ ಅರ್ಥವೇ ದೊರತು

ಮಿಕ್ಕೆಲ್ಲ ವಸ್ತುಗಳ ಸತ್ಯತ್ವವನ್ನು ನಿರಾಕರಿಸುವಂಥ ಅಗತ್ಯವಿಲ್ಲ. ಪ್ರಪಂಚವು ಪರಮಾತ್ಮನಿಗೆ ಅಧೀನವಾಗಿರುವುದೆಂದರೆ ಮಿಥ್ಯಾಭೂತವಾದ ಜಗದಾರೋಪಕ್ಕೆ ಬ್ರಹ್ಮನು ಅಧಿಷ್ಠಾನನು ಎನ್ನುವ ಅರ್ಥದಲ್ಲಿಯಲ್ಲ; 'ಸರ್ವಸತ್ತಾಪ್ರತೀತಿಪ್ರವೃತ್ತಿನಿಮಿತ್ತಂ'ಆಗಿರುವ ಪರಮಾತ್ಮನು ಎಂಥ ಪ್ರಪಂಚವನ್ನು ನೀಡಿದ್ದಾನೆ ?

"ಬಹುಚಿತ್ರಜಗದ್ಬಹುಧಾಕರಣಾತ್ ಪರಶಕ್ತಿರನಂತಗುಣಃ ಪರಮಃ|"
—(ದ್ವಾದಶಸ್ತೋತ್ರ, 4.3)

ಬಹು ಆಶ್ಚರ್ಯಭರಿತವಾದ ಅವಾಂತರ ಭೇದ ಭಿನ್ನವಾದ ಲೋಕವನ್ನು ನಾನಾ ಪ್ರಕಾರವಾಗಿ ಸೃಷ್ಟಿಮಾಡಿರುವುದರಿಂದ ಪರಮಾತ್ಮನು ಲೋಕವಿಲಕ್ಷಣವಾದ ಸಾಮರ್ಥ್ಯವುಳ್ಳವನು ಹಾಗೂ ಅಪರಿಮಿತ ಗುಣಗಳುಳ್ಳವನು.

ಸ್ವತಂತ್ರ ಅಸ್ವತಂತ್ರವೆಂಬ ಎರಡು ಮೂಲ ತತ್ತ್ವಗಳನ್ನು ಘೋಷಿಸಿರುವುದರಿಂದಲೂ, 'ಸ್ವಯಂ ಸದ್ಭೇದವಾದಿನಃ' ಎಂದು ಆಚಾರ್ಯರು ಅನುವ್ಯಾಖ್ಯಾನಾದಿ ಗ್ರಂಥಗಳಲ್ಲಿ ಹೇಳಿರುವುದರಿಂದಲೂ ಇವರ ತತ್ತ್ವಕ್ಕೆ 'ದ್ವೈತ ಸಿದ್ಧಾಂತ' ಎಂಬ ಪ್ರಸಿದ್ಧಿಯುಂಟು. ಇವರ ಸಾಕ್ಷಾಚ್ಛಿಷ್ಯರಾದ ಪದ್ಮನಾಭತೀರ್ಥರು ಈ ರೀತಿಯಾಗಿಯೇ ಕರೆದಿದ್ದಾರೆ :—

"ಇದಾನೀಂ ದ್ವೈತಪಕ್ಷ ಏವ ಜಿಜ್ಞಾಸಾ ಸಂಭವತೀತ್ಯುಕ್ತಾರ್ಥಮುಪಸಂಹರತಿ ಅತ ಇತಿ" —(ಸನ್ನ್ಯಾಯರತ್ನಾವಳೀ)

ಆಚಾರ್ಯರನ್ನು ಪ್ರಶಂಸಿಸಿರುವ ಪ್ರಸಿದ್ಧ ಶ್ಲೋಕದಲ್ಲಿ ಇವರ ಸಿದ್ಧಾಂತವನ್ನು 'ತತ್ತ್ವವಾದ' ಎಂಬ ಹೆಸರಿನಿಂದಲೇ ಉಲ್ಲೇಖಿಸಲಾಗಿದೆ.

"ಯೋ ವಿಪ್ರಲಂಭ ವಿಪರೀತ ಮತಿ ಪ್ರಭೂತ-
ವಾದಾನ್ನಿರಸ್ಯ ಕೃತವಾನ್ ಭುವಿ ತತ್ತ್ವವಾದಂ ।"

ಮಧುಸೂದನ ಸರಸ್ವತಿಗಳು ತಮ್ಮ 'ಅದ್ವೈತಸಿದ್ಧಿ' ಎಂಬ ಗ್ರಂಥದಲ್ಲೂ ವಿಶಿಷ್ಟಾದ್ವೈತಿಗಳಾದ ವೇದಾಂತದೇಶಿಕರು 'ಶತದೂಷಣಿ'ಯಲ್ಲೂ ಈ ಮತವನ್ನು 'ತತ್ತ್ವವಾದ' ಎಂದೇ ನಿರ್ದೇಶಿಸಿದ್ದಾರೆ. ಈ ನಾಮಧೇಯವು ಸುಂದರವೂ ಸಮಂಜಸವೂ ಆಗಿದೆ. ಏಕೆಂದರೆ ಅಪೌರುಷೇಯ ವೇದದ ಪ್ರಾಮಾಣ್ಯವನ್ನು ಅಂಗೀಕರಿಸಿ ಕೆಲವು ಮಹಾವಾಕ್ಯಗಳು ಮಾತ್ರ ತತ್ತ್ವಾವೇದಕವು, ಉಳಿದ ಭಾಗವು ಅತತ್ತ್ವಾವೇದಕವು ಎಂದು ವಿಂಗಡಿಸುವ ಮಾಯಾವಾದಿಗಳ ಮತವನ್ನು ತತ್ತ್ವವಾದಿಗಳಾದ ಮಧ್ವಾಚಾರ್ಯರು ತೀವ್ರವಾಗಿ ಖಂಡಿಸಿದ್ದಾರೆ. ಮಂತ್ರ, ಬ್ರಾಹ್ಮಣ, ಉಪನಿಷದ್ರೂಪವಾದ ಸಕಲ ವೇದಭಾಗಗಳನ್ನೂ 'ತತ್ತ್ವವಾದ'ದ ಒಂದೇ ಅಂತಸ್ತಿನಲ್ಲಿಟ್ಟು ಇಡೀ ವೇದವಾಙ್ಮಯವನ್ನು ಝಲ್ಲರಿಯಾಡಿಸುವಷ್ಟು ಸಂಶೋಧಿಸಿದ್ದಾರೆ. ಅತತ್ತ್ವವನ್ನು ಬೋಧಿಸುವುದು ಎಂದೂ ಪ್ರಮಾಣವಾಗಲಾರದು. ವೇದೋಕ್ತವಾದ ಪ್ರಮೇಯಕ್ಕೆ ಮಿಥ್ಯಾತ್ವವನ್ನು ಅಂಗೀಕರಿಸುವವರಿಗೆ ವೇದಪ್ರಾಮಾಣ್ಯಾಂಗೀಕಾರವು ಹೇಗೆ ಕೂಡುವುದು ? ವೇದಪ್ರಾಮಾಣ್ಯವನ್ನು ಒಪ್ಪದ ಬೌದ್ಧಪಕ್ಷವನ್ನೇ ಹಿಡಿದಂತಾಗುವುದು.

"ಕಥಂ ಚೈವಂ ವಾದಿನಾಂ ವೇದವಾದಿತ್ವಂ। ವೇದೋಕ್ತಸ್ಯ ಮಿಥ್ಯಾತ್ವಾಂಗೀಕಾರಾದೇವ ಹಿ ಅವೇದವಾದಿತ್ವಂ ಬೌದ್ಧಾದೀನಾಮಪಿ ॥"

—ವಿಷ್ಣುತತ್ತ್ವನಿರ್ಣಯ, 197-98

ವೇದಪ್ರಾಮಾಣ್ಯ ರಕ್ಷಣೆಗೆ ಮಧ್ವಾಚಾರ್ಯರಷ್ಟು ದಕ್ಷತೆಯನ್ನು ವಹಿಸಿದ ದಾರ್ಶನಿಕರು ವಿರಳ. 'ಸರ್ವೇ ವೇದಾ ಯತ್ಪದಮಾಮನಂತಿ ; 'ವೇದೈಶ್ಚ ಸರ್ವೈರಹಮೇವ ವೇದ್ಯಃ' ಮುಂತಾದ ಪ್ರಮಾಣಗಳಿಂದ ಪರಮಾತ್ಮನು ಸಕಲ ವೇದಗಳಿಂದಲೇ ವೇದ್ಯ

ನೆಂದೂ, ಭಾರತೀವಿಜಯ ಮೊದಲಾದವರು ಮಾಡಿದ ಹಿಂದಿನ ಇಪ್ಪತ್ತೊಂದು ಬ್ರಹ್ಮಸೂತ್ರ ಭಾಷ್ಯಗಳನ್ನು ಆಚಾರ್ಯರು ಸಪ್ರಮಾಣವಾಗಿ ಸಯುಕ್ತಿಕವಾಗಿ ಖಂಡಿಸಿ ವೇದವ್ಯಾಸರ ಹೃದಯವನ್ನೇ ತಮ್ಮ ಗ್ರಂಥಗಳಲ್ಲಿ ತೋರ್ಪಡಿಸಿದ್ದಾರೆ.

ವೇದೋಕ್ತ ವೈಷ್ಣವ ಸಂಪ್ರದಾಯವನ್ನು ಪ್ರಗತಿಪಥದಲ್ಲಿ ಕೊಂಡೊಯ್ಯಲು ಮಧ್ವಾಚಾರ್ಯರು ಅನುಸರಿಸಿದ ಮಾರ್ಗ ವಂತೂ ವಿಶಿಷ್ಟವಾದುದು. ಮುಸಲ್ಮಾನರ ದಾಳಿಯು ಬಿರುಗಾಳಿ ಯಂತೆ ಬೀಸತೊಡಗಿದ್ದ ಕಾಲದಲ್ಲಿ ಉಡುಪಿಯಿಂದ ಬದರಿಯತನಕ ಎರಡು ಬಾರಿ ನಾನಾ ರಾಜ್ಯಗಳಲ್ಲಿ ಹಾದು ವಾಯುವೇಗದಲ್ಲಿ ಸಂಚರಿಸಿದಂಥ ವೀರ ಸನ್ಯಾಸಿಗಳು. ಇವರು ಉತ್ತರ ಭಾರತದಲ್ಲಿ ಕೋಮುವಾರು ಆಂದೋಲನದಿಂದ ಎಷ್ಟೋ ಹಿಂದೂ ವಿಶ್ವವಿದ್ಯಾ ನಿಲಯಗಳು ನೆಲಸಮವಾದದ್ದನ್ನು ಆಚಾರ್ಯರು ಪ್ರತ್ಯಕ್ಷವಾಗಿ ಕಂಡಿರಲು ಸಾಧ್ಯವಿದೆ. ಇಂಥ ಪರಿಸ್ಥಿತಿಯಲ್ಲೂ ವೇದವ್ಯಾಸರ ವಿಸ್ತಾರ ವಾಙ್ಮಯದ ನಾನಾಬಗೆಯ ವಿಧ ವಿಧ ಪ್ರತಿಗಳನ್ನು ದೇಶಕಾಲಾನುಗುಣವಾಗಿ ಸಂಗ್ರಹಿಸಿ ಶುದ್ಧ ಸಂಪ್ರದಾಯವನ್ನು ದಿಟ್ಟತನದಿಂದ ಘೋಷಿಸಿದ ಕೀರ್ತಿ ಆಚಾರ್ಯರಿಗೆ ಸಲ್ಲುತ್ತದೆ. ಗಂಭೀರವಾಗಿಯೂ ಅರ್ಥಗರ್ಭಿತವಾಗಿಯೂ ವ್ಯರ್ಥವಾದ ಶಬ್ದ ಗಳಿಲ್ಲದೆ ಸಂಕುಚಿತ ವಾಕ್ಯಗಳಿಂದಲೇ ಬಹ್ವರ್ಥವನ್ನು ಪ್ರಕಾಶ ಪಡಿಸುವಂಥ ದಾರ್ಶನಿಕ ಮರ್ಯಾದೆಯನ್ನು ಅನುಸರಿಸಿರುವ ಇವರ ಗ್ರಂಥಗಳಲ್ಲಿ ಎಲ್ಲ ಪ್ರಮಾಣಗ್ರಂಥಗಳನ್ನೂ ಉಪಹರಿಸುವ ಉಳಿಸಿ ಕೊಳ್ಳುವ ಸತತ ಸಾಹಸ ಸಾಗಿದೆ. ತಮ್ಮ 'ಮಹಾಭಾರತ ತಾತ್ಪರ್ಯ ನಿರ್ಣಯ'ದ ಎರಡನೆಯ ಅಧ್ಯಾಯದಲ್ಲಿ,

ಕ್ವಚಿದ್ಗ್ರಂಥಾನ್ಪ್ರಕ್ಷಿಪಂತಿ ಕ್ವಚಿದಂತರಿತಾನಪಿ ।
ಕುರ್ಯುಃ ಕ್ವಚಿಚ್ಚ ವ್ಯತ್ಯಾಸಂ ಪ್ರಮಾದಾತ್ಕ್ವಚಿದನ್ಯಥಾ ।

ಗೀತಾಭಾಷ್ಯದ ಹಾಗೂ ಬ್ರಹ್ಮಸೂತ್ರ ಭಾಷ್ಯಗಳ ಆದ್ಯಪದ್ಯಗಳಲ್ಲಿ 'ಗೀತಾರ್ಥಂ ವಕ್ಷ್ಯಾಮಿ ಲೇಶತಃ', 'ಸೂತ್ರಾರ್ಥ ಉಚ್ಯತೇ' ಮುಂತಾಗಿ ಆಚಾರ್ಯರು ತಮ್ಮ ವ್ಯಾಖ್ಯಾನಗ್ರಂಥಗಳಲ್ಲಿ ಭಗವದ್ಗೀತಾ, ಬ್ರಹ್ಮಸೂತ್ರ ಇವುಗಳ ನೈಜವಾದ ಅರ್ಥವನ್ನೇ ನಿರೂಪಿಸುತ್ತೇವೆಂದು ಸಾರಿದ್ದಾರೆ. ಮೂಲವಿಲ್ಲದೆ ಯಾವ ಅರ್ಥವನ್ನೂ ಸ್ವಕಪೋಲಕಲ್ಪಿತವಾಗಿ ಇವರು ವಿವರಿಸದೆ ಶ್ರುತ್ಯಾದಿ ಪ್ರಮಾಣಗಳೇ ಮೂಲವೆಂದು ಉದ್ಘೋಷಿಸಿದ್ದಾರೆ. ಪ್ರಮಾಣ ಜ್ಞಾನವಿಲ್ಲದೆ ಬ್ರಹ್ಮಜ್ಞಾನವನ್ನು ಸಂಪಾದಿಸಲು ಸಾಧ್ಯವಿಲ್ಲ; ಆದುದರಿಂದ ಪ್ರಮಾಣಗಳ ಸ್ವರೂಪವನ್ನು ಮೊಟ್ಟಮೊದಲು ತಿಳಿಯಬೇಕೆಂಬ ಉದ್ದೇಶದಿಂದ 'ಪ್ರಮಾಣಲಕ್ಷಣ' ಎಂಬ ಪ್ರಕರಣವನ್ನು ರಚಿಸಿದ್ದಾರೆ :—

"ಆನಂದತೀರ್ಥಮುನಿನಾ ಬ್ರಹ್ಮತರ್ಕೋಕ್ತಮಾರ್ಗತಃ ।
ಮಾನಲಕ್ಷಣಮಿತ್ಯುಕ್ತಂ ಸಂಕ್ಷೇಪಾದ್ಬ್ರಹ್ಮಸಿದ್ಧಯೇ ॥"

—(ಪ್ರಮಾಣ ಲಕ್ಷಣ, ಉಪಾಂತ್ಯಶ್ಲೋಕ)

ಪ್ರಮಾಣ ತತ್ತ್ವ

ಮಧ್ವಾಚಾರ್ಯರ 'ಪ್ರಮಾಣ ಲಕ್ಷಣ'ಕ್ಕೆ ಜಯತೀರ್ಥರು 'ನ್ಯಾಯ ಕಲ್ಪಲತೆ' ಎಂಬ ಟೀಕೆಯನ್ನು ರಚಿಸಿದ್ದಾರೆ. ಸಂಕ್ಷೇಪವಾಗಿ ಆ ವಿಷಯಗಳನ್ನೇ ಪ್ರತಿಪಾದಿಸುವ 'ಪ್ರಮಾಣ ಪದ್ಧತಿ' ಎಂಬ ಗ್ರಂಥವನ್ನೂ ಬರೆದಿದ್ದಾರೆ. ನ್ಯಾಯ ವೈಶೇಷಿಕ ಸಿದ್ಧಾಂತ ಹಾಗೂ ಮೀಮಾಂಸಕಾದಿ ದರ್ಶನಗಳಲ್ಲಿ ಹೇಳಿರುವ ವಿಷಯಗಳನ್ನು ವಿಮರ್ಶಿಸಿದ್ದಾರೆ. ತತ್ತ್ವನಿರ್ಣಯ ಮತ್ತು ಅನುವ್ಯಾಖ್ಯಾನ (ವೈಶೇಷಿಕಾಧಿಕರಣ) ಗ್ರಂಥಗಳಲ್ಲೂ ಆಚಾರ್ಯರು ಪ್ರಮಾಣ ಪ್ರಮೇಯ ವ್ಯವಸ್ಥೆಯನ್ನು ವಿವೇಚಿಸಿದ್ದಾರೆ. ದ್ವೈತಸಿದ್ಧಾಂತದಲ್ಲಿ

ಪ್ರಮಾಣಶಬ್ದಕ್ಕೆ ಯಥಾರ್ಥಜ್ಞಾನದಲ್ಲಿಯೂ ಮತ್ತು ಅದರ ಸಾಧನದಲ್ಲಿಯೂ ಪ್ರಯೋಗವಿದೆ. ನೈಯಾಯಿಕರು ಪ್ರಮಾಣ ಶಬ್ದಕ್ಕೆ ಯಥಾರ್ಥಜ್ಞಾನವೆಂಬ ಅರ್ಥದಲ್ಲಿ ಪ್ರಯೋಗವನ್ನು ಹೆಚ್ಚಾಗಿ ಮಾಡುವುದಿಲ್ಲ.

ಯಥಾರ್ಥವಾದದು ಪ್ರಮಾಣವೆಂದು ಕರೆಯಲ್ಪಡುತ್ತದೆ. ಇಲ್ಲಿ ಯಥಾರ್ಥವಾದುದು' ಎಂಬಂಶವು ಲಕ್ಷಣಭಾಗವು, 'ಪ್ರಮಾಣ ವೆನ್ನಿಸಿಕೊಳ್ಳುತ್ತದೆ' ಎಂಬುದು ಲಕ್ಷ್ಯನಿರ್ದೇಶಭಾಗವು. ಈ ಲಕ್ಷಣಕ್ಕೆ ಯಥಾರ್ಥಜ್ಞಾನವು ಮತ್ತು ಅದಕ್ಕೆ ಸಾಧನವಾದ ಇಂದ್ರಿಯಾದಿಗಳು ಲಕ್ಷ್ಯವಾಗಿರುತ್ತವೆ. ಯಥಾರ್ಥವೆಂದರೆ ಅರ್ಥ ವನ್ನು ಮೀರದೆ ಇರುವುದು. ಅರ್ಥವೆಂದರೆ, ತಿಳಿಯಲ್ಪಡುವ ವಸ್ತುವು. ಯಾವ ಕಾಲದಲ್ಲಿ ಮತ್ತು ಯಾವ ದೇಶದಲ್ಲಿ ಹೇಗೆ ಇರುತ್ತದೆಯೋ ಹಾಗೆಯೇ ಆ ವಸ್ತುವನ್ನು ವಿಷಯೀಕರಿಸುವ ಜ್ಞಾನವು ಮತ್ತು ಅದಕ್ಕೆ ಸಾಧನವೂ ಕೂಡ ಪ್ರಮಾಣವೆಂದು ಕರೆಯಲ್ಪಡುತ್ತದೆ. ಘಟಾದಿ ಪದಾರ್ಥಗಳ ತಿಳುವಳಿಕೆಯು ಹಾಗೂ ಅದಕ್ಕೆ ಸಲಕರಣೆಯಾದ ಕಣ್ಣು ಮೊದಲಾದ ಇಂದ್ರಿಯ ಗಳೂ ಕೂಡ ಪ್ರಮಾಣಗಳಾಗುತ್ತವೆ.

ಥಳಥಳವೆಂದು ಮೆರುಗುತ್ತಿರುವ ಶುಕ್ತಿಯನ್ನು (ಕಪ್ಪೇ ಚಿಪ್ಪನ್ನು) ನೋಡಿ ಬೆಳ್ಳಿಯೆಂದು ಭ್ರಮಿಸುವುದು ವಿಪರ್ಯಯ ವಾಗುತ್ತದೆ. ವಿಪರ್ಯಯ ಜ್ಞಾನವು ಇಂದ್ರಿಯದೋಷದಿಂದಲೂ ಅರ್ಥದೋಷದಿಂದಲೂ ಅನುಮಾನಾಭಾಸದಿಂದಲೂ ಉಂಟಾಗು ತ್ತದೆ.

ಜ್ಞಾನವೆಲ್ಲವೂ ಯಥಾರ್ಥವೇ ಹೊರತು ಅಯಥಾರ್ಥಜ್ಞಾನವೇ ಇಲ್ಲವೆಂದು ಪ್ರಾಭಾಕರರೆಂಬ ಮೀಮಾಂಸಕರು ಹೇಳುತ್ತಾರೆ.

'ಕಪ್ಪೆಚಿಪ್ಪಿನಲ್ಲಿ ಬೆಳ್ಳಿ' ಎಂಬ ಜ್ಞಾನವು ಅಯಥಾರ್ಥವಲ್ಲ! 'ಇದು ಬೆಳ್ಳಿ' ಎನ್ನುವಾಗ 'ಇದು' ಎಂಬ ಅಂಶದಲ್ಲಿ ಎದುರಿಗೆ ಕಾಣುವ ಶುಕ್ತಿ ಮೊದಲಾದ ಪದಾರ್ಥವನ್ನು ಗ್ರಹಿಸುತ್ತದೆ. ಆ ಪದಾರ್ಥವು ಅಲ್ಲಿಯೇ ಇರುವುದರಿಂದ ಆ ಅಂಶದಲ್ಲಿ ಅಯಥಾರ್ಥವಾಗುವುದಿಲ್ಲ. ಬೆಳ್ಳಿಯೆಂಬಂಶವು ಥಳಥಳಿಸುತ್ತಿರುವ ಕಾರಣದಿಂದ ಅಂತಹ ವಸ್ತುವನ್ನು ನೋಡುತ್ತಲೇ ಬೆಳ್ಳಿಯ ಸಂಸ್ಕಾರ ಹಾಗೂ ಸ್ಮರಣವು ಹುಟ್ಟುತ್ತದೆ. ಅದು ಯಥಾರ್ಥವೇ ಆದುದರಿಂದ ಯಥಾರ್ಥವಾದ ಗ್ರಹಣ ಸ್ಮರಣಗಳೆಂಬ ಎರಡು ಜ್ಞಾನಗಳೇ 'ಇದು ಬೆಳ್ಳಿ' ಎಂಬ ತೋರುವಿಕೆಗೆ ಕಾರಣವಾಗುವುದರಿಂದ ಅಯಥಾರ್ಥಜ್ಞಾನವು ಎಲ್ಲಿಂದ ಬಂತು? ಪ್ರಾಭಾಕರರ ಈ ಮತವನ್ನು ಒಪ್ಪುವ ಪಕ್ಷದಲ್ಲಿ ಕೆಲವು ದೋಷಗಳು ತಪ್ಪುವಲ್ಲಿಲ್ಲವೆಂದೂ, ಆದ್ದರಿಂದಲೇ ಜ್ಞಾನವೆಲ್ಲವೂ ಯಥಾರ್ಥವೆಂದು ಹೇಳಿಬಿಟ್ಟರೆ ಜವಾಬ್ದಾರಿ ಕಳೆದುಕೊಂಡಂತೆ ಎನ್ನುವ ಅಭಿಪ್ರಾಯ ಈ ಕಾರಿಕೆಯಿಂದ ತಿಳಿದುಬರುತ್ತದೆ :—

> "ಸಾಕಾರವಾದಾಪಸತ್ತೋ ನ ಭಾನಾತ್
> ಸಂವಿದ್ವಿರೋಧಾದಥ ಹೇತ್ವಭಾವಾತ್ ।
> ಧಿಯಾಮನಾಶ್ವಾಸಭಯಾಚ್ಚ ನೇಷ್ಟಾ
> ಯತೋಽನ್ಯಥಾಖ್ಯಾತಿರತೋ ಯಥಾರ್ಥಾ ॥"

"ಅಯಥಾರ್ಥಜ್ಞಾನವನ್ನೊಪ್ಪುವ ಪಕ್ಷದಲ್ಲಿ ಕೆಲವು ದೋಷಗಳು ಬರುತ್ತವೆ. ಅಂಥ ಜ್ಞಾನದಲ್ಲಿ ತೋರುವ ಬೆಳ್ಳಿಯು ಅಲ್ಲಿಯೇ ಇದೆಯೆಂದು ಹೇಳಲು ಸಾಧ್ಯವಿಲ್ಲವಷ್ಟೆ. ಇಲ್ಲದಂತಹ ವಸ್ತುವು ತೋರಬೇಕಾದರೆ ಜ್ಞಾನದ ಆಕಾರವೆಂದು ಹೇಳಬೇಕಾಗುವುದರಿಂದ ಸಾಕಾರವಿಜ್ಞಾನವಾದಿಗಳೆಂಬ ಬೌದ್ಧರ ಸಿದ್ಧಾಂತವನ್ನೇ ಅಂಗೀಕರಿಸುವ ಪ್ರಸಂಗ ಬರುತ್ತದೆ. ಇಲ್ಲದಂತಹ ವಸ್ತುವೇ ತೋರುತ್ತ

ದೆಂದು ಹೇಳಿದರೆ ಅಸತ್‌ಖ್ಯಾತಿವಾದವನ್ನು ಒಪ್ಪಬೇಕಾಗುತ್ತದೆ. 'ಬೆಳ್ಳಿಯನ್ನು ನಾನು ತಿಳಿದಿದ್ದೇನೆ' ಎಂಬ ಅನುವ್ಯವಸಾಯದ ವಿರೋಧವೂ ಬರುತ್ತದೆ. ಇಂತಹ ಜ್ಞಾನಕ್ಕೆ ಕಾರಣ ನಿರೂಪಿಸುವುದು ಶಕ್ಯವಿಲ್ಲ. ಒಂದು ಜ್ಞಾನವು ಅಯಥಾರ್ಥವಾದರೆ ಜ್ಞಾನಾಂತರಗಳೂ ಅಯಥಾರ್ಥವಾಗಬೇಕಾಗುವುದರಿಂದ ಜ್ಞಾನದಲ್ಲಿಯೇ ವಿಶ್ವಾಸವಿಲ್ಲದಂತಾಗುತ್ತದೆ....ಇತ್ಯಾದಿ ದೋಷಗಳನ್ನು ಪರ್ಯಾಲೋಚಿಸಿದರೆ ಜ್ಞಾನವೆಲ್ಲಾ ಯಥಾರ್ಥವೆಂದೇ ಹೇಳುವುದು ಯುಕ್ತವೆಂದು ಪ್ರಾಭಾಕರರ ಮತ ಸಾಗಿದೆ.

"ಯಥಾರ್ಥಂ ಸರ್ವವಿಜ್ಞಾನಮಿತಿ ವೇದವಿದಾಂ ಮತಮ್" ಎಂದು ವಿಶಿಷ್ಟಾದ್ವೈತಿಗಳಾದ ರಾಮಾನುಜೀಯರು ಭ್ರಮಜ್ಞಾನವನ್ನು ಅಂಗೀಕರಿಸುವುದಿಲ್ಲ. "ತಾಸಾಂ ತ್ರಿವೃತಂ ತ್ರಿವೃತಂ" ಎಂಬ ವೇದವಾಕ್ಯದಿಂದಲೂ, "ತ್ರ್ಯಾತ್ಮಕತ್ವಾತ್ತು ಭೂಯಸ್ತ್ವಾತ್" ಎಂಬ ಬ್ರಹ್ಮಸೂತ್ರದಿಂದಲೂ, "ಸರ್ವೇತಾನ್ಯೋನ್ಯಸಂಯೋಗಂ" ಎಂಬ ಪುರಾಣವಾಕ್ಯಗಳಿಂದಲೂ ಈ ಪ್ರಪಂಚದಲ್ಲಿರುವ ಸರ್ವಪದಾರ್ಥಗಳೂ ಸರ್ವಾತ್ಮಕವೆಂದು ತಿಳಿದುಬರುವುದರಿಂದ ಎಲ್ಲಾ ವಸ್ತುಗಳಲ್ಲಿಯೂ ಎಲ್ಲಾ ವಸ್ತುಗಳ ಅಂಶವೂ ಇರುತ್ತದೆ. ಆದ್ದರಿಂದ 'ಶುಕ್ತಿಯಲ್ಲಿ ರಜತ'ವೆಂಬ ಜ್ಞಾನಗಳೆಲ್ಲವೂ ಯಥಾರ್ಥವೇ ಎಂದು ನಿರೂಪಿಸಿರುತ್ತಾರೆ, ಇದಕ್ಕೆ ವಿರುದ್ಧವಾಗಿ ನ್ಯಾಯಾಯಿಕರು, ಅದ್ವೈತಿಗಳು ಮತ್ತು ದ್ವೈತಿಗಳು "ನಾನು ಇದುವರೆವಿಗೂ ಶುಕ್ತಿಯನ್ನೇ ರಜತವನ್ನಾಗಿ ತಿಳಿದಿದ್ದೆನು" ಎಂಬ ಅನುವ್ಯವಸಾಯ ಜ್ಞಾನದ ವಿರೋಧ ಬರುವುದರಿಂದ, ಭ್ರಾಂತಿಜ್ಞಾನವನ್ನು ಅಂಗೀಕರಿಸಲೇಬೇಕೆಂದು ಅಭಿಪ್ರಾಯಪಡುತ್ತಾರೆ. ಈ ಸ್ಥಳದಲ್ಲಿ ತೋರುವ ಬೆಳ್ಳಿಯು ದೇಶಾಂತರದಲ್ಲಿ ಇರುವಂಥಾದ್ದೇ ಎಂದು

ವೈಶೇಷಿಕ ನೈಯಾಯಿಕರು ಹೇಳುತ್ತಾರೆ. ಜ್ಞಾನ ಸ್ವರೂಪಭೂತವೇ ಎಂದು ವಿಜ್ಞಾನವಾದಿಗಳಾದ ಬೌದ್ಧರೂ, ತತ್ಕಾಲದಲ್ಲಿಯೇ ಹುಟ್ಟಿದಂತಹುದು ಎಂದು ಭಾಸ್ಕರರೂ ಹೇಳುತ್ತಾರೆ. ಸತ್ತು, ಅಸತ್ತು ಮತ್ತು ಸದಸತ್ತೂ ಅಲ್ಲದೆ ಅನಿರ್ವಚನೀಯವೇ ಎಂದು ಅದ್ವೈತಿಗಳು ಪ್ರತಿಪಾದಿಸುತ್ತಾರೆ. ಈ ಪಕ್ಷಗಳೆಲ್ಲಾ ರಜತವೆಂದು ತಿಳಿದ ಮೇಲೆ ಪರೀಕ್ಷಾದಿಗಳನ್ನು ಮಾಡಲು 'ರಜತವು ಅಲ್ಲ, ಅಸತ್ತು' ಎಂದು ತಿಳಿದುಕೊಳ್ಳುತ್ತಾರಾದ ಕಾರಣ, ಅಂತಹ ಅನುಭವಕ್ಕೆ ವಿರುದ್ಧವಾಗಿದೆ ಎಂದು ಪರ್ಯಾಲೋಚಿಸಿ, ಅಸತ್ತಾಗಿರುವ ರಜತವೇ ಶುಕ್ತಿಯಲ್ಲಿ ತೋರುತ್ತದೆಂದು ಹೇಳುವುದೇ ಸರಿಯಾದದ್ದು ಎನ್ನುವುದು ದ್ವೈತಮತದವರ ಅಭಿಪ್ರಾಯ.

"ಅನುಭೂತಿಃ ಪ್ರಮಾಣಂ । ಸ್ಮೃತಿವ್ಯತಿರಿಕ್ತಂ ಜ್ಞಾನಂ ಅನುಭೂತಿರಿತಿ ॥"—ಅನುಭವವೇ ಪ್ರಮಾಣ ; ಸ್ಮೃತಿವ್ಯತಿರಿಕ್ತವಾದ ಜ್ಞಾನವು ಅನುಭವವೆನಿಸಿಕೊಳ್ಳುತ್ತೆಂದು ಪ್ರಾಭಾಕರರು ಪ್ರಮಾಣ ಲಕ್ಷಣವನ್ನು ಹೇಳುತ್ತಾರೆ. ಸ್ಮೃತಿ ಮತ್ತು ವೇದಾದಿಗಳಲ್ಲಿ ಈ ಲಕ್ಷಣವಿಲ್ಲದಿರುವುದರಿಂದ ಅವ್ಯಾಪ್ತಿದೋಷ ಬರುತ್ತದೆ. ಆದ್ದರಿಂದ ಅಸಂಗತವಾಯಿತು.

"ಜ್ಞಾತತಾ ಪ್ರಾಕಟ್ಯಾಪರಪರ್ಯಾಯವಾಚ್ಯಸ್ಯ ಪ್ರಮೇಯಾಶ್ರಿತಸ್ಯ ಪ್ರಕಾಶವಿಶೇಷಸ್ಯ ಸಾಧನಂ ಕ್ರಿಯಾಜ್ಞಾನಂ ಪ್ರಮಾಣಮಿತಿ ಭಾಟ್ಟಾನಾಂ ಲಕ್ಷಣಂ"— ಜ್ಞಾತತಾ ಪ್ರಾಕಟ್ಯವೆಂಬ ಪ್ರಕಾಶವಿಶೇಷಕ್ಕೆ ಸಾಧನವಾದಂಥ ಜ್ಞಾನವು ಪ್ರಮಾಣವೆಂದು ಭಾಟ್ಟರು ಲಕ್ಷಣಾಂತರವನ್ನು ಹೇಳುತ್ತಾರೆ. ಜ್ಞಾತತಾ ಧರ್ಮವು ಇಂದ್ರಿಯ ವಿಷಯಕವಾಗಿ ವರ್ತಮಾನ ಪದಾರ್ಥಗಳಲ್ಲಿ ಮಾತ್ರ ಹುಟ್ಟುವುದು. ಆದ್ದರಿಂದ ಭೂತಭವಿಷ್ಯತ್ಪದಾರ್ಥಗಳ

ಜ್ಞಾನವು ಪ್ರಮಾಣವಾಗದೆ ಹೋಗುತ್ತದೆ.

"ಅನಧಿಗತತಥಾಭೂತಾರ್ಥಜ್ಞಾನಂ ಪ್ರಮಾಣಂ"—ಪೂರ್ವದಲ್ಲಿ ತಿಳಿಯದಂತಹ ವಸ್ತುವಿನ ಅನುಭವವು ಪ್ರಮಾಣವು ಎನ್ನುವ ಭಾಟ್ಟರ ಮತ್ತೊಂದು ಲಕ್ಷಣಾಂತರದಲ್ಲೂ ಪ್ರಮಾಣಭೂತವಾದ ಸ್ಮೃತಿ ಮತ್ತು ವೇದಾದಿಗಳು ಸೇರದೆ ಅವ್ಯಾಪ್ತಿ ಬರುವುದು.

"ಸಮ್ಯಗನುಭವಸಾಧನಂ ಪ್ರಮಾಣಂ"—ಸಮೀಚೀನ ಜ್ಞಾನ ಸಾಧನವು ಅಂದರೆ ಯಥಾರ್ಥಾನುಭವಕ್ಕೆ ಸಾಧನವೇ ಪ್ರಮಾಣವೆನ್ನುವ ನೈಯಾಯಿಕರ ಲಕ್ಷಣದಲ್ಲೂ ಸಮೀಚೀನ ಅನುಭವವು ಪ್ರಮಾಣವಲ್ಲವೆಂದಂತಾಗಿ ಅವ್ಯಾಪ್ತಿ ದೋಷವಿದೆ.

"ಪ್ರಮಾವ್ಯಾಪ್ತಂ ಪ್ರಮಾಣಂ"-ಪ್ರಮಾವ್ಯಾಪ್ತವು ಪ್ರಮಾಣವೆನ್ನುವ ಉದಯನನ ಲಕ್ಷಣವನ್ನು ಅಂಗೀಕರಿಸಿದರೆ ಪ್ರಮೇಯದಲ್ಲಿ ಈಶ್ವರಪ್ರಮಾವ್ಯಾಪ್ತತ್ವವಿರುವುದರಿಂದ ಅತಿವ್ಯಾಪ್ತಿದೋಷವಿದ್ದೇ ಇರುವುದು.

ಆದ್ದರಿಂದ ಮಧ್ವಾಚಾರ್ಯರು ಅತಿವ್ಯಾಪ್ತಿ-ಅವ್ಯಾಪ್ತಿ-ಅಸಂಭವಾದಿ ದೋಷಗಳಿಗೆ ಆಸ್ಪದವಿಲ್ಲದ ಹಾಗೂ ಸರ್ವರೀತಿಯಲ್ಲೂ ಆದರಣೀಯವಾದ ಪ್ರಮಾಣ ಲಕ್ಷಣವನ್ನು ನಿರ್ದೇಶಿಸಿದ್ದಾರೆ. "ಯಥಾರ್ಥಂ ಪ್ರಮಾಣಂ"—ಅರ್ಥ (ವಿಷಯ)ವನ್ನು ಮೀರದೆ ಇದ್ದದ್ದು ಪ್ರಮಾಣ.

ಕೇವಲ ಪ್ರಮಾಣ, ಅನುಪ್ರಮಾಣವೆಂದು ಪ್ರಮಾಣದಲ್ಲಿ ಎರಡು ವಿಧವು. ವಸ್ತುವನ್ನು ಇದ್ದಹಾಗೆಯೇ ಗ್ರಹಿಸುವುದು ಕೇವಲಪ್ರಮಾಣವು. ಉದಾಹರಣೆಗೆ, 'ಇದು ಘಟ' ಮುಂತಾದ ಜ್ಞಾನವು ಆಲೋಚನೆಯಿಲ್ಲದೆ ಉಂಟಾಗುವಂಥಾದ್ದು. ಯಥಾರ್ಥ ಜ್ಞಾನಕ್ಕೆ ಸಾಧನವಾದುದು ಅನುಪ್ರಮಾಣವು. ಉದಾಹರಣೆಗೆ,

ಇಂದ್ರಿಯಾದಿ ಪ್ರತ್ಯಕ್ಷ, ಅನುಮಾನ ಹಾಗೂ ಆಗಮ.

ಕೇವಲ ಪ್ರಮಾಣವು ಈಶ್ವರಜ್ಞಾನ-ಲಕ್ಷ್ಮೀಜ್ಞಾನ-ಯೋಗಿ ಜ್ಞಾನ-ಅಯೋಗಿಜ್ಞಾನವೆಂದು ನಾಲ್ಕು ವಿಧವು. ಇವುಗಳ ಗಂಭೀರ ನಿರೂಪಣೆಯು ಶಾಸ್ತ್ರದಲ್ಲಿ ವಿಸ್ತಾರವಾಗಿ ಮಾಡಲ್ಪಟ್ಟಿದೆ. ಈಶ್ವರ ಜ್ಞಾನವಾದರೋ ಅನಾದಿನಿತ್ಯ, ಸ್ವತಂತ್ರ ಹಾಗೂ ಸ್ವಪರಗತ ಅಖಿಲ ವಿಶೇಷಗಳನ್ನು ವಿಷಯೀಕರಿಸುವುದು. ಲಕ್ಷ್ಮೀಜ್ಞಾನವೂ ಅನಾದಿನಿತ್ಯ, ಈಶ್ವರೈಕಾಧೀನವಾದುದರಿಂದ ಪರತಂತ್ರ; ಆದರೆ ಈಶ್ವರನನ್ನು ಬಿಟ್ಟು ಉಳಿದ ಎಲ್ಲ ವಿಷಯಗಳನ್ನೂ ಆಲೋಚನೆ ಯಿಲ್ಲದೆ ಗ್ರಹಿಸುವುದು. ಈಶ್ವರಜ್ಞಾನಕ್ಕಿಂತ ಲಕ್ಷ್ಮೀಜ್ಞಾನವು ಸ್ಪಷ್ಟತ್ವದಲ್ಲಿ ನ್ಯೂನವಾದುದು. ಋಜುಯೋಗಿಗಳು, ತಾತ್ತ್ವಿಕ ಯೋಗಿಗಳು, ಅತಾತ್ತ್ವಿಕಯೋಗಿಗಳೆಂದು ಯೋಗಿಗಳಲ್ಲಿ ಮೂರು ವಿಭಾಗವುಂಟು. ಋಜುಯೋಗಿಗಳ ಜ್ಞಾನವು ಅನಾದಿನಿತ್ಯ ವಾಗಿದ್ದು ಈಶ ಲಕ್ಷ್ಮೀ ಬಿಟ್ಟು ಅನ್ಯತ್ರ ಆಲೋಚನೆಯಿಂದ ಸರ್ವ ವಿಷಯಗಳನ್ನೂ ಗ್ರಹಿಸುವುದು. ತಾತ್ತ್ವಿಕಯೋಗಿಜ್ಞಾನವು ಅನಾದಿ, ಅತಾತ್ತ್ವಿಕಯೋಗಿ ಜ್ಞಾನವು ಸಾದಿ, ವಿಷಯಗ್ರಹಣ ದಲ್ಲಿ ಈಶಾದನ್ಯತ್ರ ಕ್ರಮೇಣ ಹ್ರಾಸವುಳ್ಳದ್ದು. ಅಯೋಗಿಜ್ಞಾನ ವಾದರೋ ಉತ್ಪತ್ತಿ ಹಾಗೂ ನಾಶವುಳ್ಳದ್ದು.

ಅನುಪ್ರಮಾಣಕ್ಕೆ ಪ್ರತ್ಯಕ್ಷ - ಅನುಮಾನ - ಆಗಮವೆಂದು ಮೂರು ಪ್ರಭೇದಗಳು.

ನಿರ್ದೋಷವಾದ ಇಂದ್ರಿಯಗಳಿಗೆ ನಿರ್ದೋಷವಾದ ವಿಷಯ ಗಳಿಂದಾಗುವ ಸನ್ನಿಕರ್ಷವು (ಸಂಬಂಧ) ಪ್ರತ್ಯಕ್ಷವೆನಿಸಿಕೊಳ್ಳು ತ್ತದೆ; "ನಿರ್ದೋಷಾರ್ಥೇಂದ್ರಿಯಸನ್ನಿಕರ್ಷಃ ಪ್ರತ್ಯಕ್ಷಂ." ಇಂಥ ಪ್ರತ್ಯಕ್ಷವು ಸಾಕ್ಷಿ - ಘ್ರಾಣ-ರಸನ-ತ್ವಕ್-ಚಕ್ಷುಸ್ಸು-ಶ್ರೋತ್ರ-

ಮನಸ್ಸು ಎಂದು ಏಳು ವಿಧವು. ಈ ಇಂದ್ರಿಯಗಳ ಮಧ್ಯದಲ್ಲಿ ಮನಸ್ಸಿನ ಸಂಸ್ಕಾರದಿಂದುಂಟಾಗುವ ಜ್ಞಾನವು ಸ್ಮೃತಿಯೆಂದು ಕರೆಯಲ್ಪಡುತ್ತದೆ. ಇದು ಇಂದ್ರಿಯಜನ್ಯವಾದ ಕಾರಣ ಪ್ರತ್ಯಕ್ಷವಲ್ಲವೆಂದು ನೈಯಾಯಿಕಾದಿಗಳು ಹೇಳುವುದು ಸರಿಯಲ್ಲ. "ಸ್ಮೃತಿಃ ಪ್ರತ್ಯಕ್ಷಮೈತಿಹ್ಯಮನುಮಾನಶ್ಚತುಷ್ಟಯಂ। ಪ್ರಮಾಣಮಿತಿ ವಿಜ್ಞೇಯಂ" ಇತ್ಯಾದಿಪ್ರಮಾಣಗಳು ಸ್ಮೃತಿಗೆ ಪ್ರಾಮಾಣ್ಯವನ್ನು ಹೇಳಿದೆ. ಸ್ಮೃತಿಯೆಂಬ ಜ್ಞಾನವು ಕೇವಲ ಪ್ರಮಾಣದಲ್ಲಿ ಸೇರುವ ಪ್ರತ್ಯಕ್ಷಜ್ಞಾನರೂಪವಾಗಿದೆ. ಮನ್ವಾದಿ ಸ್ಮೃತಿಗಳು ಪ್ರತ್ಯಕ್ಷದಲ್ಲಿ ಸೇರುವುದಿಲ್ಲ ; ಆಗಮಪ್ರಮಾಣದಲ್ಲಿ ಸೇರುವುದೆಂಬ ವಿಶೇಷವನ್ನರಿಯಬೇಕು.

ಸ್ಮೃತಿಯೂ ಪ್ರಮಾಣವಾದ್ದರಿಂದ ಸ್ವಪ್ನವು ಸತ್ಯವಾದದ್ದು. ಸ್ವಪ್ನದಲ್ಲಿ ತೋರುವ ಬಾಹ್ಯತ್ವಜ್ಞಾನವು ಭ್ರಾಂತಿಯಿರಲಿ. ಆದರೆ ಮನೋನಿಮಿತ್ತ ವಾಸನಾದಿಂದ ಉಂಟಾದ ಗಜಾದಿ ಪದಾರ್ಥಗಳು ಸತ್ಯವಾದ್ದರಿಂದ ಸ್ವಪ್ನವು ಸತ್ಯ ಮತ್ತು ಪ್ರಮಾಣವೆಂದು ತಿಳಿಯಬೇಕು. ಇದನ್ನೊಪ್ಪದೆ ಅದ್ವೈತಿಗಳು ಸ್ಮೃತಿ, ಪ್ರತ್ಯಭಿಜ್ಞಾ, ಸ್ವಪ್ನಗಳು ಭ್ರಾಂತಿ ಹಾಗೂ ಅಪ್ರಮಾಣವೆಂದು ಭಾವಿಸುತ್ತಾರೆ.

ಪಂಚಜ್ಞಾನೇಂದ್ರಿಯ ಹಾಗೂ ಮನಸ್ಸಿನಿಂದ ಹುಟ್ಟಿದ ಜ್ಞಾನಗಳು ನಿಯಮೇನ ಯಥಾರ್ಥವೆಂದು ಹೇಳಲಿಕ್ಕಾಗದು. ಎಷ್ಟಾದರೂ ಪುರುಷಸಂಬಂಧವಿರುವುದರಿಂದ ಶಂಕಾಕ್ಕೆ ಆಸ್ಪದವುಂಟು. ಅಪೌರುಷೇಯ ಆಗಮವೇನೋ ಪುರುಷಸಂಬಂಧವಿಲ್ಲದ್ದರಿಂದ ನಿಯತಯಾಥಾರ್ಥ್ಯವುಳ್ಳದ್ದು. ಹೀಗಿರುವಾಗ ನಿತ್ಯವ್ಯವಹಾರದಲ್ಲಿ ಇಂದ್ರಿಯಗಳಿಂದ ಹುಟ್ಟುವ ಜ್ಞಾನದಲ್ಲಿ ವಿಶ್ವಾಸವನ್ನಿಡುವುದು ಹೇಗೆ ? ಇಂಥ ಶಂಕಾಸ್ಪದವಾದ ಜ್ಞಾನದಿಂದ ಲೋಕದಲ್ಲಿ ನೇರ

ವಾದ ವ್ಯವಹಾರಾದಿಗಳು ಹೇಗೆ ಸಂಭವವಿಸುವುವು ? ಈ ಪ್ರಶ್ನೆಯನ್ನು ಪರಿಹರಿಸಲು ಪೂರ್ವೋಕ್ತ ದರ್ಶನಕಾರರು ಸಮರ್ಥರಾಗಿಲ್ಲ. ಹುಟ್ಟುವ ಜ್ಞಾನವೆಲ್ಲವೂ ಯಥಾರ್ಥವೆಂದು ಹೇಳುವ ಸಾಂಖ್ಯ ಮೊದಲಾದವರ ವಾದ ಅನುಭವಕ್ಕೆ ವಿರುದ್ಧವಾಗಿದೆ. ದೋಷದಿಂದ ಅಯಥಾರ್ಥಜ್ಞಾನ ಹುಟ್ಟುವುದೆಂದು ಹೇಳುವ ನೈಯಾಯಿಕರು ಅದರ ಸ್ವರೂಪವನ್ನು ಚನ್ನಾಗಿ ಪರಿಶೀಲಿಸಿಲ್ಲ. ಯಾವುದು ಯಥಾರ್ಥ ? ಯಾವುದು ಅಯಥಾರ್ಥ ? 'ಅನುವ್ಯವಸಾಯ' ದಿಂದ ಜ್ಞಾನದ ಸತ್ಯಾಸತ್ಯತೆಯು ನಿರ್ಣಯಿಸಲ್ಪಡುವುದೆಂದು ಹೇಳಿದರೆ, ಅನುವ್ಯವಸಾಯವೂ ಜ್ಞಾನವಾದ್ದರಿಂದ ಅದರ ಪ್ರಾಮಾಣ್ಯವನ್ನು ಯಾರು ನಿರ್ಣಯಿಸಬೇಕು ? ಇದಕ್ಕೆ ಇನ್ನೊಂದು ಜ್ಞಾನ, ಅದಕ್ಕೆ ಮತ್ತೊಂದು ಜ್ಞಾನ-ಹೀಗೆ ಅನವಸ್ಥೆ ಬರುವುದರಿಂದ ವಿಷಯಸಿದ್ಧಿ ಆಗುವುದಿಲ್ಲ. ಆದ್ದರಿಂದ ಮಧ್ವಾಚಾರ್ಯರು ಈ ಎಲ್ಲ ಜ್ಞಾನಗಳ ಪ್ರಾಮಾಣ್ಯವನ್ನು ನಿರ್ಣಯಿಸಲಿಕ್ಕೆ 'ಸಾಕ್ಷಿ' ಎಂಬ ಸ್ವರೂಪೇಂದ್ರಿಯವನ್ನು ನಿರ್ಣಯಿಸಿದ್ದಾರೆ. ಇದು ಜ್ಞಾನರೂಪವೂ ಸ್ವಪ್ರಕಾಶವೂ ಸ್ವತಃಪ್ರಮಾಣವೂ ಆಗಿದೆ. ಬಾಹ್ಯೇಂದ್ರಿಯಗಳಿಂದ ಹುಟ್ಟುವ ಬಾಹ್ಯಜ್ಞಾನವು ಕೆಲವು ವೇಳೆ ಆರೋಪಿತವಾಗಬಹುದು ; ಆದರೆ 'ನಾನು ಸುಖವಾಗಿದ್ದೇನೆ', 'ನನ್ನನ್ನು ನಾನು ತಿಳಿದಿದ್ದೇನೆ', 'ನಿನ್ನೆ ಸುಖವಾಗಿ ನಿದ್ದೆ ಮಾಡಿದೆನು' ಮುಂತಾದ ಆಂತರಿಕ ಜ್ಞಾನ ಎಂದಿಗೂ ಆರೋಪಿಸಲ್ಪಡತಕ್ಕದಲ್ಲ. 'ನಿನ್ನೆ ನೀನು ಸುಖವಾಗಿ ನಿದ್ದೆ ಮಾಡಲಿಲ್ಲ' ಎಂದು ಮತ್ತೊಬ್ಬರು ನನ್ನ ಸುಖನಿದ್ರೆಯ ಮೇಲೆ ಆರೋಪಮಾಡಿದರೆ ನಂಬಿಸುವುದಕ್ಕಾಗುವುದೇ ? 'ಸಾಕ್ಷಿ'ಯನ್ನು ಅಪ್ರಮಾಣವೆಂದು ಹೇಳುವುದಕ್ಕೆ ಪ್ರಮಾಣಗಳಿಲ್ಲ. ಒಂದು ವೇಳೆ ಸಾಕ್ಷಿಗೇ

ಅಪ್ರಾಮಾಣ್ಯಶಂಕೆಯು ಬಂದರೆ, ಅರಣ್ಯದಲ್ಲಿ ಆನೆಯು ನಿರಾತಂಕವಾಗಿ ಹೋಗುವಾಗ ಮುಳ್ಳಿನಕೊಂಪೆ ಅಡ್ಡಬಂದರೆ ನಿಂತು ಅದನ್ನು ಆಚೆತಳ್ಳಿ ಮತ್ತೆ ನಿರಾತಂಕವಾಗಿ ಹೋಗುವಂತೆ, ಸಾಕ್ಷಿಯು ಸ್ವತಃ ಪ್ರಾಮಾಣ್ಯವನ್ನು ಗ್ರಹಿಸುತ್ತದೆ ಹಾಗೂ ದೋಷಶಂಕಾ ಬಂದಾಗ ಅಪ್ರಾಮಾಣ್ಯವನ್ನು ತಿಳಿದುಕೊಳ್ಳುತ್ತದೆ.

ಮನಸ್ಸು ಅಂತರಿಂದ್ರಿಯ; ಸಾಕ್ಷಿಯಾದರೋ ಸ್ವರೂಪೇಂದ್ರಿಯ. 'ಸಾಕ್ಷಿ'ಯ ವಿವೇಚನೆಯು ಮಧ್ವಾಚಾರ್ಯರು ತತ್ತ್ವಶಾಸ್ತ್ರಕ್ಕೆ ನೀಡಿರುವ ವಿಶಿಷ್ಟ ಕಾಣಿಕೆಯು. ವ್ಯಾವಹಾರಿಕ ಪ್ರಾಮಾಣ್ಯವಾಗಿದ್ದು ಅದ್ವೈತ ಸಾಕ್ಷಾತ್ಕಾರವಾದ ಮೇಲೆ ಇಲ್ಲದಂತಹ ಅದ್ವೈತಿಗಳ ಪ್ರತ್ಯಕ್ಷವನ್ನು ಆಚಾರ್ಯರು 'ಸಾಕ್ಷಿ'ಬದ್ಧವಾಗಿ ಖಂಡಿಸಿದ್ದಾರೆ.

ಹೀಗೆಯೆ ಅನುಮಾನ ಮತ್ತು ಆಗಮ ಪ್ರಮಾಣಗಳನ್ನೂ ವಿಸ್ತಾರವಾಗಿ ವಿಮರ್ಶಿಸಿರುವ ಆಚಾರ್ಯರು ಹೇಳುತ್ತಾರೆ :— "ನಿರ್ದೋಷೋಪಪತ್ತಿರನುಮಾನಂ", "ನಿರ್ದೋಷಶಬ್ದಃ ಆಗಮಃ" ಪ್ರತ್ಯಕ್ಷ ಆಗಮಗಳ ಬೆಂಬಲವಿದ್ದರೆ ಮಾತ್ರ ಅನುಮಾನವು ಪ್ರಮಾಣವಾಗಬಲ್ಲದು. ಏಕೆಂದರೆ, 'ನಾನುಮಾ ಕಾಮಚಾರಿಣೀ' · ಉಪಮಾನ, ಅರ್ಥಾಪತ್ತಿ, ಅನುಪಲಬ್ಧಿ ಮುಂತಾದ ಇತರ ವಾದಿಗಳು ವಿಸ್ತರಿಸಿ ಹೇಳಿರುವ ಪ್ರಮಾಣಗಳು ಪ್ರತ್ಯಕ್ಷಾನುಮಾನಗಳಲ್ಲಿಯೇಅಂತರ್ಗತವಾಗಿರುವುದೆಂದು ಆಚಾರ್ಯರ ಅಭಿಪ್ರಾಯ.

ಮುನಿದರ್ಶನ

ಶ್ರೀಮುಷ್ಣಮಾಹಾತ್ಮ್ಯದಲ್ಲಿ ಈ ಶ್ಲೋಕವಿದೆ :—

"ಶ್ರೀಮಧ್ವಃ ಕಲ್ಪವೃಕ್ಷಶ್ಚ ಜಯಾಚಾರ್ಯಾಸ್ತು ಧೇನವಃ ।
ಚಿಂತಾಮಣಿಸ್ತು ವ್ಯಾಸಾರ್ಯಃ ಮುನಿತ್ರಯಮುದಾಹೃತಂ ॥"

ಮುನಿತ್ರಯರಲ್ಲಿ ಮೊದಲಿಗರಾಗಿ ಮಧ್ವಾಚಾರ್ಯರನ್ನು ಉಲ್ಲೇಖಿಸಲಾಗಿದೆ. ವೇದಾಂತಪ್ರಪಂಚದಲ್ಲಿ ಇವರ ವಿಶಿಷ್ಟ ಸ್ಥಾನಮಾನವನ್ನು ಸೂಚಿಸುವಂತಹ ಶ್ಲೋಕವಿದು. ಪ್ರಮಾಣ ಪ್ರಮೇಯ ವ್ಯವಸ್ಥೆಯಲ್ಲಿ ಆಚಾರ್ಯರ ದಾರ್ಶನಿಕ ಮರ್ಯಾದೆಗೆ ಸಂದ ಗೌರವವಿದು. ವ್ಯಾಕರಣಶಾಸ್ತ್ರಪ್ರವರ್ತಕರಾದ ಪಾಣಿನಿ, ವರರುಚಿ, ಪತಂಜಲಿ ಎಂಬ ಮೂವರು ಆಚಾರ್ಯರನ್ನು 'ಮುನಿತ್ರಯ'ನೆಂಬ ನಾಮಧೇಯದಿಂದಲೇ ವೈಯಾಕರಣರು ವ್ಯವಹರಿಸಿರುವರು. ಇವರಲ್ಲಿ ಪಾಣಿನಿಯು ಶಬ್ದಶಾಸ್ತ್ರಕ್ಕೆ ಮೂಲವಾದ ಸೂತ್ರಗಳನ್ನೂ ಆ ಸೂತ್ರಗಳಿಗೆ ವರರುಚಿಗಳು ವೃತ್ತಿಯನ್ನೂ, ಪತಂಜಲಿಗಳು ಮಹಾಭಾಷ್ಯವೆಂಬ ಸೂತ್ರವ್ಯಾಖ್ಯಾನವನ್ನೂ ರಚಿಸಿರುವರು. ಈ ಮೂವರ ಸಾಹಸದಿಂದ ಸಾಧನಜೀವಿಗಳು ಸಾಧುಶಬ್ದಗಳ ವಿವೇಚನಾಶಕ್ತಿಯನ್ನು ಹೊಂದಿ ಪ್ರಪಂಚದ ಸುಗಮ ಮಾರ್ಗಕ್ಕೆ ಕಾರಣರಾಗಿರುವಂತೆ, ಮಧ್ವಮುನಿಗಳ ಪರಂಪರೆಯೂ ಮಾರ್ಗದರ್ಶಕವಾಗಿದೆ. ವೇದವ್ಯಾಸರ ವಿಸ್ತಾರ ವಾಙ್ಮಯದ ಹೃದಯವನ್ನರಿತು ಮೂವತ್ತೇಳು ಗ್ರಂಥಗಳನ್ನು ಮಧ್ವಾಚಾರ್ಯರು ರಚಿಸಿದ್ದಾರೆ. ಅವು ಅತ್ಯಂತ ಗಂಭೀರವೆನಿಸಿ ಪ್ರೌಢ ಶೈಲಿಯಲ್ಲಿ ಸಾಗಿರುವುದರಿಂದ ಸಾಮಾನ್ಯರಿಗೆ ಅರ್ಥವಾಗುವಂತೆ ಟೀಕಾಚಾರ್ಯರೆಂದು ಪ್ರಸಿದ್ಧರಾದ ಜಯತೀರ್ಥರು ಪ್ರಾಯಃ ಮೂಲಗ್ರಂಥಗಳಿಗೆಲ್ಲ ಟೀಕೆಯನ್ನು ಮಾಡಿ ಮೂಲಾರ್ಥವನ್ನು ಸಮಂಜಸವಾಗಿ ಹೊರಹೊಮ್ಮಿಸಿದ್ದಾರೆ. ಈ ಗ್ರಂಥಗಳಲ್ಲೂ ಭಾವಗರ್ಭಿತವಾಗಿ ಸಂಕ್ಷೇಪದಿಂದ ನಿರೂಪಿತವಾಗಿರುವ ವಿಷಯಗಳನ್ನು ಪ್ರತ್ಯೇಕಿಸಿ ದರ್ಶನಾಂತರದ ಪೂರ್ವಪಕ್ಷಗಳನ್ನು ಸಯುಕ್ತಿಕವಾಗಿ ನಿರಾಕರಿಸಿ ಮಧ್ವಾಚಾರ್ಯರ ದ್ವೈತತತ್ತ್ವವೇ ಶ್ರೇಷ್ಠದರ್ಶನ

ವೆಂದು ವಿಶ್ವತೋಮುಖ ವಾದಕ್ರಮದಿಂದ ವಿವರಿಸಿರುವ ಗ್ರಂಥಗಳನ್ನು ವ್ಯಾಸರಾಜರು ರಚಿಸಿದ್ದಾರೆ. ಶ್ರೇಷ್ಠವಾದ ವೇದಾಂತ ದರ್ಶನಕ್ಕೆ ಪ್ರವರ್ತಕರಾಗಿರುವುದರಿಂದ ಈ ಆಚಾರ್ಯತ್ರಯರು ಮುನಿತ್ರಯರೆಂದು ಪ್ರಖ್ಯಾತರಾಗಿರುವ ಅಂಶವು ಮೇಲಿನ ಶ್ಲೋಕದಿಂದ ತಿಳಿಯಬರುತ್ತದೆ.

ಈ ಮುನಿತ್ರಯರೂ ಅವತರಿಸಿದ್ದು ಕರ್ನಾಟಕ ರಾಜ್ಯದಲ್ಲಿ. ಇಂಥವರ ಸ್ಮರಣೆ ವಿಶ್ವಕ್ಕೇ ಭಾಗ್ಯೋದಯವನ್ನು ತರುವಂಥಾದ್ದು. ಇಂಥವರ ದರ್ಶನ ಮುನಿದರ್ಶನ. ತಾವು ವಾಯುದೇವರ ಅವತಾರವಾಗಿ ಮಧ್ವ ಅಥವಾ ಆನಂದತೀರ್ಥರೆಂದು ಕಲಿಯುಗದ ೪೩೦೦ ವರ್ಷಗಳಾದ ಮೇಲೆ ಹುಟ್ಟಿ ಹರಿತತ್ತ್ವವನ್ನು ಪ್ರತಿಪಾದಿಸಿದ ಅಂಶವು, ಆಚಾರ್ಯರೇ ರಚಿಸಿರುವ 'ಮಹಾಭಾರತ ತಾತ್ಪರ್ಯನಿರ್ಣಯ' ಶ್ಲೋಕದಲ್ಲಿ ಉಕ್ತವಾಗಿದೆ:—

"ಚತುಃಸಹಸ್ರೇ ತ್ರಿಶತೋತ್ತರೇ ಗತೇ
ಸಂವತ್ಸರಾಣಾಂ ತು ಕಲೌ ಪೃಥಿವ್ಯಾಮ್ ।
ಜಾತಃ ಪುನರ್ವಿಪ್ರತನುಃ ಸ ಭೀಮೋ
ದೈತ್ಯೈರ್ನಿಗೂಢಂ ಹರಿತತ್ತ್ವಮಾಹ ॥"

—(32-131)

ಹನುಮ-ಭೀಮ-ಮಧ್ವರೆಂಬ ಮೂರೂ ಅವತಾರಗಳಲ್ಲಿ ಭಗವತ್ಕಾರ್ಯಸಾಧಕರಾಗಿ, ಈಯುಗದಲ್ಲಂತೂ ಕೇವಲ ಎಂಟುನೂರು ವರ್ಷಗಳ ಹಿಂದೆ ಸತ್ತ್ವಹೀನ ಸಮಾಜಕ್ಕೆ ಚಾಲಕಶಕ್ತಿ ನೀಡಿದವರಾಗಿ ಸರ್ವತೋಮುಖ ಸಾಮರ್ಥ್ಯ ತೋರಿದ ಆಚಾರ್ಯರ ಬಗ್ಗೆ ಬಳಿತ್ಥಾಸೂಕ್ತ, ಮನ್ಯುಸೂಕ್ತ, ಪವಮಾನಸೂಕ್ತಮೊದಲಾದಶ್ರುತಿಗಳೂ ಮತ್ತು ಅನೇಕ ಪುರಾಣವಾಕ್ಯಗಳೂ ಪ್ರಮಾಣಗಳಾಗಿವೆ—

"ತೃತೀಯಮಸ್ಯ ವೃಷಭಸ್ಯ ದೋಹಸೇ ದಶಪ್ರಮತಿಂ ಜನಯಂತ

ಯೋಷಣಃ । ನಿರ್ಯದೀಂ ಬುಧ್ನಾನ್ಮಹಿಷಸ್ಯ ವರ್ಪಸ ಈಶಾನಾಸ ಶ್ಶವಸಾ ಕ್ರಂತ ಸೂರಯಃ । ಯದಿ ಮನು ಪ್ರದಿವೋ ಮಧ್ವ ಆಧವೇ ಗುಹಾಸಂತಂ ಮಾತರಿಶ್ವಾ ಮಥಾಯತಿ ।" —(ಬಳಿತ್ಥಾ ಸೂಕ್ತ)

—ಯಾವ ಕಾರಣ ಲಕ್ಷ್ಮೀದೇವಿಯು ರೂಪಗಳು ವೇದಾಖ್ಯ ಗೋವಿನಿಂದ ತತ್ತ್ವಜ್ಞಾನರೂಪ ಅಮೃತಗರೆಯಲು ದೇವಶ್ರೇಷ್ಠರಾದ ವಾಯುದೇವರ ದಶಪ್ರಮತಿ (ಪೂರ್ಣಪ್ರಜ್ಞ) ಎಂಬ ಹೆಸರುಳ್ಳ ಮೂರನೆಯ ಅವತಾರವನ್ನು ಹುಟ್ಟಿಸಿದರೋ ಆ ಕಾರಣದಿಂದ ರುದ್ರಾದಿ ದೇವತೆಗಳು ಆನಂದದಿಂದ ಕೂಡಿದವರಾಗಿ ಜ್ಞಾನಿಗಳಾದರು. ಮಧ್ವರು ವಿಶಿಷ್ಟಪ್ರಕಾಶವುಳ್ಳವರಾದ್ದರಿಂದ ಹೃದಯಗುಹೆಯಲ್ಲಿ ಗೂಢವಾಗಿರುವ ಭಗವಂತನ ಮತ್ಸ್ಯಾದಿ ರೂಪಗಳನ್ನು ಶ್ರುತಿಸ್ಮೃತಿಗಳಿಗೆ ಅನುಸರಿಸಿ ಸರ್ವತ್ರ ನಿಯಾಮಕವೆಂದು ವಿಚಾರಮಥನ ಮಾಡಿ ಸ್ಥಾಪಿಸುತ್ತಾರೆ...'ಮಧ್ವಃ' ಮತ್ತು 'ದಶಪ್ರಮತಿಂ' ಎಂಬ ಶ್ರೀಮದಾಚಾರ್ಯರ ರೂಢನಾಮಗಳು ಇಲ್ಲಿವೆ. ಆಚಾರ್ಯರು ರಹಸ್ಯವಾದ ಹರಿತತ್ತ್ವವನ್ನು ವಿಚಾರಪೂರ್ವಕವಾಗಿ ನಿರ್ಣಯಿಸುತ್ತಾರೆಂದು ಹೇಳುವ 'ಗುಹಾಸಂತಂ ಮಾತರಿಶ್ವಾ ಮಥಾಯತಿ' ಎಂಬ ಭಾಗದಲ್ಲಿ 'ಮಾತರಿಶ್ವಾ' ಎಂಬ ವಾಯುವಾಚಕಶಬ್ದವೇ ಆಚಾರ್ಯರಲ್ಲಿ ಪ್ರಯೋಗಿಸಲ್ಪಟ್ಟಿದೆ.

ಪುರಾಣಗಳಲ್ಲೂ ಆಚಾರ್ಯರ ಸ್ತೋತ್ರವಿದೆ:—

"ವಾಯೋರ್ದಿವ್ಯಾನಿ ರೂಪಾಣಿ
ಹನೂಮಾನಿತಿ ವಿಖ್ಯಾತೋ ರಾಮಕಾರ್ಯಧುರಂಧರಃ ।
ಸ ವಾಯುರ್ಭೀಮಸೇನೋsಭೂತ್ ದ್ವಾಪರಾಂತೇ ಕುರೂದ್ವಹ ।
ಕೃಷ್ಣಂ ಸಂಪೂಜಯಾಮಾಸ ಹತ್ವಾ ದುರ್ಯೋಧನಾದಿಕಾನ್ ।
ದ್ವೈಪಾಯನಸ್ಯ ಸೇವಾರ್ಥಂ ಬದರ್ಯಾಂ ತು ಕಲೌ ಯುಗೇ ।
ವಾಯುಶ್ಚ ಯತಿರೂಪೇಣ ಕೃತ್ವಾ ದುಶ್ಶಾಸ್ತ್ರಖಂಡನಂ ।
ತತಃ ಕಲಿಯುಗೇ ಪ್ರಾಪ್ತೇ ತೃತೀಯೋ ಮಧ್ವನಾಮಕಃ"-(ಹರಿವಂಶ)

"....ಇತ್ಯಾಜ್ಞಪ್ತೋ ಭಗವತಾ ಕಲೌ ವಾಯುರ್ಭವಿಷ್ಯತಿ |
ಮಧ್ವನಾಮಾ ಯತಿರಸೌ...||" —(ಕೂರ್ಮಪುರಾಣ)

"ವಾಯುಸ್ತು ಯತಿರೂಪೇಣ....
ಸ ದಶಪ್ರಮತಿರ್ಭೂತ್ವಾ ಕಲೌ ಧರ್ಮಾನ್ವದಿಷ್ಯತಿ ||"
—(ಸ್ಕಾಂದಪುರಾಣ)

ಮಧ್ವಾಚಾರ್ಯರ ವಾದವೈಖರಿಗೆ ಮನಸೋತು ಶಿಷ್ಯತ್ವವನ್ನು ಅಂಗೀಕರಿಸಿದ ಪ್ರಸಿದ್ಧ ಅದ್ವೈತಪಂಡಿತರೂ ಕವಿಪುಂಗವರೂ ತಾರ್ಕಿಕಶಿರೋಮಣಿಗಳೂ ಆಗಿದ್ದ ತ್ರಿವಿಕ್ರಮಪಂಡಿತಾಚಾರ್ಯರು ತಮ್ಮ 'ವಾಯುಸ್ತುತಿ'ಯಲ್ಲಿ ಶ್ರೀಮಧ್ವಾಚಾರ್ಯರ ಮಹಿಮೆಯನ್ನು ವರ್ಣಿಸಲು ತಾವು ಅಶಕ್ತರೆಂದು ಹೀಗೆ ಹೇಳುತ್ತಾರೆ:

"ಮಧ್ವಾಖ್ಯಂ ಮಂತ್ರಸಿದ್ಧಂ ಕಿಮುತ ಕೃತವತೋ ಮಾರುತಸ್ಯಾವ-
ತಾರಂ |
ಪಾತಾರಂ ಪಾರಮೇಷ್ಠ್ಯಂ ಪದಮುಪವಿಪದಃ ಪ್ರಾಪ್ತುರಾಪನ್ನ-
ಪುಂಸಾಂ ||"

ತ್ರಿವಿಕ್ರಮಪಂಡಿತರ ಮಕ್ಕಳೂ 'ಮಧ್ವವಿಜಯ' ಕಾವ್ಯವನ್ನು ಬರೆದ ಕವಿಗಳೂ ಆದ ನಾರಾಯಣಪಂಡಿತಾಚಾರ್ಯರು ದೇವತೆಗಳಿಂದ ಸ್ತುತಿಸಲ್ಪಟ್ಟ ಭವ್ಯವ್ಯಕ್ತಿತ್ವಕ್ಕೆ ಈ ರೀತಿ ನಮಸ್ಕರಿಸಿದ್ದಾರೆ :—

"ನಮಸ್ತೇ ಪ್ರಾಣೇಶ ಪ್ರಣತವಿಭವಾಯಾವನಿಮಗಾಃ
ನಮಸ್ಸ್ವಾಮಿನ್ ರಾಮಪ್ರಿಯತಮ ಹನೂಮನ್ ಗುರುಗುಣ |
ನಮಸ್ತುಭ್ಯಂ ಭೀಮ ಪ್ರಬಲತಮ ಕೃಷ್ಣೇಷ್ಟ ಭಗವನ್ |
ನಮಶ್ಶ್ರೀಮನ್ಮಧ್ವ ಪ್ರದಿಶ ಸುದೃಶಂ ನೋ ಜಯ ಜಯ ||"

ಮಧ್ವಾಚಾರ್ಯರಿಂದ ಪ್ರವರ್ತಿತವಾದ ಭಕ್ತಿಮಾರ್ಗವು ಕರ್ನಾಟಕದಲ್ಲಿ ಪುರಂದರದಾಸರ ಪರಂಪರೆಯಿಂದಲೂ ಬಂಗಾಳದಲ್ಲಿ ಕೃಷ್ಣಚೈತನ್ಯ ಪಂಥದವರಿಂದಲೂ ವಿಶಿಷ್ಟ ಜನಪ್ರಿಯತೆಯನ್ನು ಗಳಿಸಿರುವುದು ಸರಿಯಷ್ಟೆ; ದಾಸಸಾಹಿತ್ಯದಲ್ಲಿ ತಮ್ಮ ಮೂಲ

ಗುರು ಮಧ್ವರ ಪೂರ್ವೋಕ್ತ ಅವತಾರದ ಬಗ್ಗೆ ಸ್ತೋತ್ರವುಂಟು....

"ಆ ವವನು ದೇಹದೊಳಗಿರಲು ಹರಿ ನೆಲೆಸಿಹನು
ಆ ವವನು ತೊಲಗೆ ಹರಿ ತಾ ತೊಲಗುವ
ಆ ವವನು ದೇಹದೊಳ ಹೊರಗೆ ನಿಯಾಮಕನು
ಆ ವಾಯು ನಮ್ಮ ಕುಲ ಗುರುರಾಯನು"

—ಶ್ರೀಪಾದರಾಜರು

"ಜನುಮ ಜನುಮದಲ್ಲಿ ಕೊಡು ಕಂಡ್ಯ ಹರಿಯೆ
ಅನಿಮಿತ್ತ ಬಂಧು ಶ್ರೀಕೃಷ್ಣ ದಯದಿಂದ ಎನಗೆ ||
ಹರಿಯೆ ಸರ್ವೋತ್ತಮ ರಾಣಿ ಲಕುಮಿ ಬೊಮ್ಮ
ಹರ ಇಂದ್ರಾದ್ಯಖಿಳರು ಪರಸೇವಕರು
ವರತಾರತಮ್ಯ ಪಂಚಭೇದ ಸತ್ಯವೆಂದು
ನೆರೆ ಪೇಳುವ ವಾಯುಮತದ ಸುಜ್ಞಾನವ ||...."

—ವ್ಯಾಸರಾಜರು

ಹಂಸನಾಮಕ ಪರಮಾತ್ಮನ ಪರಂಪರೆಯಲ್ಲಿ ಬಂದ ಮಧ್ವಾಚಾರ್ಯರ ಗುರುಪರಂಪರೆಯನ್ನು ಪುರಂದರದಾಸರು ವರ್ಣಿಸಿದ್ದಾರೆ :—

"ಶ್ರೀಪತಿಯ ನಾಭಿಕಮಲದಲಿ ಅಜ ಜನಿಸಿದನು
ಅಜನ ಮಾನಸಪುತ್ರರೇ ಸನಕಾದಿಗಳು
ಸನಕಾದಿಗಳ ಶಿಷ್ಯರೇ ದೂರ್ವಾಸರು
ದೂರ್ವಾಸರ ಶಿಷ್ಯರೇ ಪರತೀರ್ಥರು
ಪರತೀರ್ಥರ ಶಿಷ್ಯರೇ ಸತ್ಯಪ್ರಜ್ಞರು
ಸತ್ಯಪ್ರಜ್ಞರ ಶಿಷ್ಯರೇ ಪ್ರಾಜ್ಞತೀರ್ಥರು
ಪ್ರಾಜ್ಞತೀರ್ಥರ ಶಿಷ್ಯರೇ ಅಚ್ಯುತಪ್ರೇಕ್ಷರು
ಅಚ್ಯುತಪ್ರೇಕ್ಷರ ಸಂಜಾತರೇ ಮಹಾಭಾಷ್ಯಕಾರರು
ಮಹಾಭಾಷ್ಯಕಾರರೇ ಗುರು ಮುಖ್ಯಪ್ರಾಣರು
ಗುರುಮುಖ್ಯಪ್ರಾಣಪತಿ ನಮ್ಮ ಪುರಂದರವಿಠಲನ ದಾಸರಿಗೆ ನಮೋ ನಮಃ ||"

"ಸಂಜೀವರಾಯರ ಸ್ಮರಣೆ ಮಾಡಿದ ಮೇಲೆ ಅಂಜಿಕಿನ್ಯಾತಕಯ್ಯ
ಸಜ್ಜನರಿಗೆ
ಹನುಮ ಭೀಮ ಮಧ್ವಮುನಿಯ ನೆನೆದು ಬದುಕಿರೋ
ಅವತಾರತ್ರಯಂಗಳಿಂದ ಶ್ರೀಹರಿಯ ಸೇವಿಸುವ
ತವಕದಿಂದ ಪೂಜಿಪ ಮಹಾಮಹಿಮೆಯುಳ್ಳವನು
ಕವಿತವಾಕ್ಯವಲ್ಲವಿದು ಅವಿವೇಕಿಗಳೆಂದೆಣಿಸದಿರಿ
ಭವಬಂಧನವ ಬಿಡಿಸುವ ನಮ್ಮ ಕಾವ ಪುರಂದರವಿಠಲನ ದಾಸ ||"

ಶ್ರುತಿಯಲ್ಲಿ ಹೇಳಿರುವ ವಾಯುದೇವರ ಮಹಿಮೆಯನ್ನು ಕೀರ್ತಿಸಿದ್ದೇವೆಯೆ ಹೊರತು ನಮ್ಮದು ಕವಿತವಾಕ್ಯವಲ್ಲ ಎಂದು ಪುರಂದರಾದಿದಾಸರು ಅನುವಾದಮಾಡಿದ್ದಾರೆ.

ಮಧ್ವಾಚಾರ್ಯರ ಸಾಕ್ಷಾಚ್ಛಿಷ್ಯರೂ ಉಡುಪಿಯ ಅಷ್ಟಮಠಗಳಲ್ಲೊಂದಾದ ಪಲಿಮಾರು ಮಠದ ಪ್ರಥಮ ಯತಿಗಳೂ ಆಗಿದ್ದ ಹೃಷೀಕೇಶತೀರ್ಥರಿಂದ ರಚಿತವಾದ 'ಅಣು ಮಧ್ವಚರಿತ' ಎಂಬ ಚಿಕ್ಕ ಗ್ರಂಥದಲ್ಲಿ ಆಚಾರ್ಯರ ಜನ್ಮ-ನಿರ್ಗಮಗಳ ಬಗ್ಗೆ ಹೀಗಿದೆ :—

"....ವಿಲಂಬಿ ಪರಿವತ್ಸರೇ । ಆಶ್ವೀಜ (ಆಶ್ವಿನೇ) ಶುಕ್ಲ ದಶಮೀ
ದಿವಸೇ ಭುವಿ ಪಾವನೇ ॥
ಜಾತೋ ಮಧ್ಯಾಹ್ನವೇಲಾಯಾಂ ಬುಧವಾರೇ ಮರುತ್ತನುಃ ॥
ಏಕೋನಾಶೀತಿವರ್ಷಾಣಿ ನೀತ್ವಾ ಮಾನುಷದೃಷ್ಟಿಗಃ ॥
ಪಿಂಗಲಾಬ್ದೇ ಮಾಘ ಶುದ್ಧ ನವಮ್ಯಾಂ ಬದರೀಂ ಯಯಾ ॥"

—ಅಂದರೆ ಮಧ್ವಾಚಾರ್ಯರು ಕಲಿಯುಗದ ೪೩೩೯ನೆಯ ವಿಳಂಬಿ ಸಂವತ್ಸರದ ಆಶ್ವಿನ ಶುಕ್ಲ ದಶಮೀ ಬುಧವಾರ ಹುಟ್ಟಿ, ಎಪ್ಪತ್ತೊಂಬತ್ತು ವರ್ಷ ಬಾಳಿ ಪಿಂಗಳ ಸಂವತ್ಸರ ಮಾಘ ಶುದ್ಧ ನವಮಿಯಂದು ಬದರಿಕಾಶ್ರಮಕ್ಕೆ ತೆರಳಿದರು. ಮರುತ್ತನು ಮಧ್ವ ಮಹಾಮುನಿಯ ರೋಮಾಂಚಕಾರಿ ಜೀವನ ವೃತ್ತಾಂತವು

'ಮಧ್ವವಿಜಯ' ವೆಂಬ ನಾರಾಯಣಪಂಡಿತಾಚಾರ್ಯರ ಸಮ ಸಾಮಯಿಕ ಗ್ರಂಥದಿಂದ ಸಾಕಷ್ಟು ತಿಳಿದುಬರುತ್ತದೆ.

ಭಾರತೀಯ ಪ್ರಸಿದ್ಧ ದಾರ್ಶನಿಕರಲ್ಲಿ ಮೂರನೆಯವರಾಗಿ ಬಂದ ವರು ಮಧ್ವಾಚಾರ್ಯರು. ಆತ್ಮವಿಲ್ಲವೆಂಬ ಬೌದ್ಧರ ನೈರಾತ್ಮ್ಯ ದರ್ಶನವು ಅತಿರೇಕವೆಸೆಯಲ್ಲಿ ಧರ್ಮಾಧರ್ಮವಿವೇಚನೆಯನ್ನು ಕಳೆದುಕೊಂಡಾಗ ಹಾಗೂ ದೇಶಾದ್ಯಂತ ಬೌದ್ಧ ಭಿಕ್ಷುಗಳ ಬಿಕ್ಷಾ ಪಾತ್ರೆಗಳೇ ಕಾಣಿಸುವಂತಾಗಿ ವೈದಿಕ ಸಿದ್ಧಾಂತಕ್ಕೆ ಕಳವಳವುಂಟಾ ದಾಗ ಶಂಕರಾಚಾರ್ಯರು (ಕ್ರಿ.ಶ. 655-687) ಅವತರಿಸಿದರು. ವೇದಾಂತದರ್ಶನವು ಅಧ್ಯಾತ್ಮದರ್ಶನ ಎಂದರೆ ಆತ್ಮನನ್ನು ಸಾಧಿ ಸುವ ದರ್ಶನ ಎಂದು ಸಾರಿ, ತಮ್ಮ ಅತ್ಯಲ್ಪ ಜೀವಿತಕಾಲದಲ್ಲೇ ವಿಸ್ತಾರ ಭಾಷ್ಯಾದಿಗಳನ್ನು ರಚಿಸಿದ್ದಲ್ಲದೆ ಆಸೇತುಹಿಮಾಚಲ ಪರ್ಯಂತ ಸಂಚಾರಮಾಡಿ ಬೌದ್ಧ ಪ್ರತಿಪಕ್ಷವನ್ನು ಸ್ಥಾಪಿಸಲು ಸಮರ್ಥರಾದರು. ಅನಂತರ ರಾಮಾನುಜಾಚಾರ್ಯರು (ಕ್ರಿ.ಶ. 1017-1137) ಅವತರಿಸಿ ಪರಮಾತ್ಮನಿಗೂ ಪ್ರಪಂಚಕ್ಕೂ ಶರೀರಾತ್ಮಸಂಬಂಧವನ್ನು ವಿವೇಚಿಸುವ ಮಾರ್ಗದಲ್ಲಿ ಸಮಾಜ ಸುಧಾರಕರೂ ಆಗಿ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿ ದರು. ಇವರಿಬ್ಬರಾದ ಮೇಲೆ ವೇದಾಂತಪ್ರಪಂಚದಲ್ಲಿ ಮುಖ್ಯ ವಾಗಿ ಕಾಣಿಸಿಕೊಂಡ ಮಧ್ವಾಚಾರ್ಯರು (ಕ್ರಿ.ಶ. 1238-1317) ಬೃಹತ್ತರ ತತ್ತ್ವಜಾಲವನ್ನೇ ಬಿಡಿಸಬೇಕಾಯಿತು. ಪರಂಪರೆಯಿಂದ ಬಂದಂತಹ ಬಹು ದರ್ಶನಗಳ ಹಿನ್ನಲೆಯಲ್ಲಿ ಶ್ರುತಿ ಸ್ಮೃತಿ ಇತಿಹಾಸಗಳ ಸ್ವತಂತ್ರ ಸಮನ್ವಯವನ್ನು ಸಾಧಿಸಿದ್ದು ಮಧ್ವಾ-ಚಾರ್ಯರ ವೈಶಿಷ್ಟ್ಯ. ಬ್ರಹ್ಮಾಂಡದ ವೈವಿಧ್ಯಮಯ ಅಪಾರ ಒಗಟುಗಳ ಬಗ್ಗೆ ಅನಂತ ಜೀವರಾಶಿಗಳ ಹೃದಯಾಂತರಾಳದಲ್ಲೇ

ವಿಧವಿಧವಾಗಿ ಆಂದೋಳನವೆದ್ದಾಗ ಆ ಸ್ವಾಂತ ಸಂತಾಪವನ್ನು ಪರಮಾತ್ಮನ ಪರಮಪ್ರಸಾದದಿಂದಲೇ ಪರಿಹರಿಸಿಕೊಳ್ಳುವ ಪ್ರಶಾಂತ ಪಥವನ್ನು ಪೂರ್ಣಪ್ರಜ್ಞರಲ್ಲಿ ಪರಿಶೀಲಿಸಲು ಸಾಕಷ್ಟು ಸಾಧನ ಸಾಹಿತ್ಯವಿದೆ. ವೇದಾಂತ ವಾಙ್ಮಯವನ್ನು ಝಲ್ಲರಿಯಾಡಿಸಿದಂತೆ ಸಂಶೋಧಿಸಿರುವ ಆಚಾರ್ಯರು ಓದುಗರಿಗೆ ಎಚ್ಚರಿಕೆಕೊಡುತ್ತಾರೆ: "ಕೇವಲ ಒಂದು ಎರಡು ಗ್ರಂಥಗಳನ್ನು ಓದಿದವರು ನಮ್ಮ ಗ್ರಂಥ ಗಳಲ್ಲಿ ವಿರೋಧವನ್ನು ಹುಡುಕವ ಕುಚೋದ್ಯಕ್ಕೆ ಇಳಿಯಬಾರದು!" ಎಂದು. ಮಧ್ವಾಚಾರ್ಯರ ಬಳಿ ಅಮೂಲ್ಯ ಗ್ರಂಥಭಂಡಾರ ವಿತ್ತೆಂದು ಸಮಕಾಲೀನ ಚರಿತ್ರೆಯಿಂದ ತಿಳಿದುಬರುತ್ತದೆ.

ಶ್ರುತಿಗಳಲ್ಲಿ ಮುಖ್ಯವಾಗಿ ಋಗ್ವೇದ, ಯಜುರ್ವೇದ, ಸಾಮ ವೇದ, ಪೈಂಗಿಶ್ರುತಿ, ಭಾಲ್ಲವೇಯಶ್ರುತಿ, ಪಿಪ್ಪಿಲಾದ ಶ್ರುತಿ, ನಾರಾಯಣಶ್ರುತಿ,ಮಹೋಪನಿಷತ್, ಪರಮೋಪನಿಷತ್, ಶ್ವೇತಾ ಶ್ವತರೋಪನಿಷತ್ ಹಾಗೂ ಪ್ರಸಿದ್ಧವಾದ ದಶೋಪನಿಷತ್ತುಗಳೂ; ಭಾರತದಲ್ಲಿ ಹೆಚ್ಚಾಗಿ ಮೋಕ್ಷಧರ್ಮವೂ ; ಪುರಾಣೇತಿಹಾಸಗಳಲ್ಲಿ ವಿಶೇಷವಾಗಿ ಭಾಗವತ, ಬ್ರಹ್ಮಾಂಡ, ಬ್ರಹ್ಮವೈವರ್ತ, ಬ್ರಹ್ಮ, ಗರುಡ, ಕೂರ್ಮ, ನಾರದ, ಪದ್ಮ, ಸ್ಕಾಂದ, ವರಾಹ, ಮತ್ಸ್ಯ, ಆಗ್ನೇಯ, ವಿಷ್ಣು, ಹರಿವಂಶವೂ; ಸಂಹಿತೆಗಳಲ್ಲಿ ಐತರೇಯಸಂಹಿತಾ, ಋಕ್ಸಂಹಿತಾ, ಸಾಮಸಂಹಿತಾ, ಯಜುಸ್ಸಂಹಿತಾ, ಮಹಾ ಸಂಹಿತಾ ವ್ಯೋಮಸಂಹಿತಾ, ಪರಮಸಂಹಿತಾ, ಪ್ರಕಾಶಸಂಹಿತಾ, ಬೃಹತ್ಸಂಹಿತಾ ಹಾಗೂ ವಿಷ್ಣುಸಂಹಿತಾ ; ತಂತ್ರಗಳಲ್ಲಿ ಬೃಹತ್ತಂತ್ರ, ಪುರುಷೋತ್ತಮ ತಂತ್ರ ; ತರ್ಕದಲ್ಲಿ ಬೃಹತ್ತರ್ಕ, ಬ್ರಹ್ಮತರ್ಕ; ವ್ಯಾಕರಣದಲ್ಲಿ ಮಹಾವ್ಯಾಕರಣ ; ನಿಘಂಟುಗಳಲ್ಲಿ ಅಭಿದಾನ, ಶಬ್ದನಿರ್ಣಯ :—ಇತ್ಯಾದಿ ಐನೂರಕ್ಕೂ ಹೆಚ್ಚು

ಅಧ್ಯಾತ್ಮ ಅಮೂಲ್ಯ ಗ್ರಂಥಗಳ ಉಲ್ಲೇಖವೂ ಮಧ್ವಾಚಾರ್ಯರ ಕೃತಿಗಳಲ್ಲಿ ಕಂಡುಬರುತ್ತವೆ.

ಮಧ್ವಾಚಾರ್ಯರ ಜನ್ಮಸ್ಥಳದ ಇತಿಹಾಸವೆಂದರೆ ನಾನಾ ಧರ್ಮಗಳ ಸಂಗಮವೂ ಹೌದು; ಗೊಂದಲವೂ ಅಹುದು. ಬೃಹತ್ ವೃಕ್ಷದ ಅಸಂಖ್ಯಾತ ಇಳಿಜಾರುಗಳಲ್ಲಿ ಪುಟವಿಕ್ಕಿ ಇಣಿಕಿ ಬರುವ ಸೂರ್ಯರಶ್ಮಿಯಂತೆ ವೈವಿಧ್ಯಮಯ ತತ್ತ್ವಸಂಪ್ರದಾಯಗಳು ದಕ್ಷಿಣಕನ್ನಡ ನಾಡಿನಲ್ಲಿ ಡೊಂಕುಡೊಂಕಾಗಿಯೆ ನೆಲೆಸಿದ್ದವು, 'ನಾಗರಖಂಡ'ವೆಂದು ಪುರಾಣಪ್ರಸಿದ್ಧವಾದ ಈ ಜಾಗದಲ್ಲಿ ಬಹು ಕಾಲ ನಾಡನ್ನಾಳಿದ ನಾಗಸಂತತಿಯವರೇ ಆದ ಅಲೂಪರಿಂದ ಪ್ರೋತ್ಸಾಹಿಸಲ್ಪಟ್ಟ ನಾಗದೇವತೆಗಳ ಪ್ರಾಚೀನ ಪೂಜಾವೈಭವದ ಅಂಶ ಇಂದಿಗೂ ಉಳಿದು ಬಂದಿದೆ. ವ್ಯಾಪಾರಕ್ಕಾಗಿ ಬಂದ ಅರಬ್ಬೀ ಜನರ ಪ್ರಭಾವ ತುಳುಭಾಷೆಯ ಜಾನಪದ ಗೀತೆಗಳಲ್ಲೂ ಪ್ರತಿ ಬಿಂಬಿಸಿದೆ. ಮತ್ತೆ ಗ್ರೀಕ್ ಜನರ ಸಂಪರ್ಕ, ನಾಥಪಂಥ, ಮಹಾ ಯಾನ ಬೌದ್ಧಪಂಥದ ಪ್ರಭಾವ ಹಾಗೂ ಸಂಗಮ, ಹತ್ತು ಹನ್ನೊಂದನೇ ಶತಮಾನದಲ್ಲಿ ಜೈನಧರ್ಮದ ವ್ಯಾಪ್ತಿ, ನಂತರ ಗೋದಾವರಿ ಕಡೆಯಿಂದ ಭಾಟ್ಟ ಸಂಪ್ರದಾಯ, ಕೇರಳದ ತುದಿ ಯಿಂದ ಶಂಕರಾಚಾರ್ಯರ ಅದ್ವೈತ ಸಿದ್ಧಾಂತ, ಕ್ರೈಸ್ತರ ಪ್ರಚಾರ ಕೇಂದ್ರಗಳಾಗಿ ಬೆಳೆದ ಚರ್ಚ್‌ಗಳು, ಸುತ್ತಲಿನ ಹಿಂದೂಪ್ರದೇಶ ಗಳನ್ನು ಧೂಳಿಪಟಗೊಳಿಸುತ್ತಿದ್ದ ಮುಸಲ್ಮಾನರ ಧಾಳಿ-ಇತ್ಯಾದಿ ಒಂದುಜಂಜಾಟದ ಜಾಗದಲ್ಲೇ ಮಧ್ವಾಚಾರ್ಯರು ಅವತರಿಸಿದ್ದು. ಅನಾರ್ಯ ಕಲ್ಪನೆಗಳು ಅಳಿಸಿಹೋಗಿರಲಿಲ್ಲ. ಬಂದ ಬಂದ ದೇವತೆ ಗಳು ಭೂತಗಳ ಆಕಾರವನ್ನು ಹೊಂದುವಂತಾಗಿ ಸ್ಥಳೀಯ ಬೊಬ್ಬರ್ಯ, ದುಗ್ಗಿಲಾಯ, ಕಲ್ಕುಡ, ಪಂಜುರ್ಲಿಗಳಾಗಿದ್ದವು.

ಇಂತಹಸ್ಥಳದಲ್ಲೇ ಕೃಷ್ಣನ ದೇವಾಲಯವನ್ನು ಸ್ಥಾಪಿಸಿ ವೈದಿಕವಾದ ಸಾತ್ತ್ವಿಕ ಹಿನ್ನಲೆಯನ್ನು ದೊರಕಿಸಿಕೊಟ್ಟವರು ಮಧ್ವಾಚಾರ್ಯರು. ಕೃಷ್ಣನು ಗೀತೆಯಲ್ಲಿ ಕೊಟ್ಟಿರುವ ಸಂದೇಶವೇ ಮಧ್ವರ ಸಿದ್ಧಾಂತವು. ನಾಡು ನಡೆದುಬಂದ ದಾರಿಯನ್ನು ಅಳಿಸದೆ ಮುಂದಿನ ಮಾರ್ಗವನ್ನು ತಿದ್ದುಕೊಳ್ಳುವಂತಾದುದು ಆಚಾರ್ಯರ ಅಪ್ರತಿಮ ಸಾಹಸದಿಂದ.

ಉಡುಪಿಗೆ ಸುಮಾರು ಎಂಟು ಮೈಲಿಗಳ ದೂರದಲ್ಲಿರುವ ಪಾಜಕಕ್ಷೇತ್ರವೆಂಬಲ್ಲಿ ಮಧ್ವಾಚಾರ್ಯರು ಜನಿಸಿದ್ದು. ಅಂದು ವಿಲಂಬಿನಾಮ ಸಂವತ್ಸರದ ವಿಜಯದಶಮಿ. ವೇದ, ಇತಿಹಾಸ, ಪುರಾಣಪ್ರವಚನಗಳಲ್ಲಿ ಪ್ರಸಿದ್ಧರಾಗಿದ್ದ ಮಧ್ಯಗೇಹಭಟ್ಟರೆಂಬುವರು ಆಚಾರ್ಯರ ಜನಕರು. ಕೇವಲ ಚಿಕ್ಕ ವಯಸ್ಸಿನಲ್ಲಿಯೇ ನಾನಾ ರೀತಿಯಲ್ಲಿ ತಮ್ಮ ಉತ್ತಮ ಸಂಸ್ಕಾರವನ್ನು ತೋರ್ಪಡಿಸಿ, ಆಚಾರ್ಯರು ಅಚ್ಯುತಪ್ರೇಕ್ಷರೆಂಬ ಯತಿಗಳಿಂದ ಸನ್ಯಾಸ ದೀಕ್ಷೆಯನ್ನು ಸ್ವೀಕರಿಸಿದರು. ಸನಕಾದಿಗಳು, ದೂರ್ವಾಸರು, ಪರತೀರ್ಥರು, ಸತ್ಯಪ್ರಜ್ಞರು—ಮುಂತಾದ ದಿವ್ಯಜ್ಞಾನಿಗಳ ಹಾಗೂ ಋಷಿಗಳ ಪರಂಪರೆಯಲ್ಲಿ ಬಂದ ಮಹಾಮಹಿಮರು ಅಚ್ಯುತಪ್ರೇಕ್ಷರು ಎಂದು ಪುರಂದರದಾಸರು ಪೂರ್ವೋಕ್ತ ಕೀರ್ತನೆಯಲ್ಲಿ ವರ್ಣಿಸಿದ್ದಾರೆ. ತಮ್ಮ ಶಿಷ್ಯ ನಿಜವಾಗಿಯೂ ಪೂರ್ಣಪ್ರಜ್ಞನೆಂಬ ಅರಿವು ಮೂಡಲು ಅಚ್ಯುತಪ್ರೇಕ್ಷರಿಗೆ ಬಹುಕಾಲ ಬೇಕಾಗಲಿಲ್ಲ; ತಾವು ಹೇಳಹೊರಟ 'ಇಷ್ಟಸಿದ್ಧಿ' ಎಂಬ ಮೊದಲ ಗ್ರಂಥವಲ್ಲೇ, ಅದರಲ್ಲೂ ಮೊದಲನೆಯ ಶ್ಲೋಕದಲ್ಲಿಯೇ ಮೂವತ್ತೆರಡು ಮಹಾದೋಷಗಳನ್ನು ಎತ್ತಿತೋರಿಸಿದ ಶಿಷ್ಯನ ವಿಚಾರವೈಭವವನ್ನು ಹೇಗೆತಾನೆ ವರ್ಣಿಸಿಯಾರು !

ಆಗಿಹೋದ ಸಿದ್ಧಾಂತಗಳಲ್ಲಿ ಮನಸ್ಸು ಸಮಾಧಾನಹೊಂದದೆ ಮಧ್ವರು ವೇದವ್ಯಾಸರ ನಿಜ ಅಭಿಪ್ರಾಯವನ್ನರಿಯಲು ತಮ್ಮದೇ ಆದ ವಿಶಿಷ್ಟ ಮಾರ್ಗವನ್ನು ರೂಪಿಸಿಕೊಂಡರು. ಸನ್ಯಾಸವಾದ ಪ್ರಾರಂಭದಲ್ಲೇ ವಾದಿಸಿಂಹ ಮತ್ತು ಬುದ್ಧಿಸಾಗರರೆಂಬ ಬೌದ್ಧ ವಿದ್ವಾಂಸರನ್ನು ಆಚಾರ್ಯರು ಎದುರಿಸಿ ವಿಜಯಿಗಳಾದರು. ಹಾಗೆಯೆ ಜೈನ ಮತ್ತು ವೈದಿಕ ವಿದ್ವಾಂಸರು ಮಧ್ವರ ಪ್ರತಿಭೆಗೆ ತಲೆಬಾಗಿದರು. "ಆನಂದತೀರ್ಥರೆಂದೂ, ಅನುಮಾನಗಳಿಂದಲೇ ಅನುಮಾನವನ್ನು ಬಿಡಿಸಬಲ್ಲ ಚಾತುರ್ಯ ಇವರಲ್ಲಿದ್ದುದರಿಂದ 'ಅನುಮಾನತೀರ್ಥ'ರೆಂದೂ ಘೋಷಿಸಲ್ಪಟ್ಟರು. ಗುರುಗಳೊಂದಿಗೆ ದಕ್ಷಿಣದೇಶದ ಯಾತ್ರೆಯನ್ನು ಕೈಗೊಂಡು, ಅನಂತಶಯನ ರಾಮೇಶ್ವರ ಕನ್ಯಾಕುಮಾರಿ ಕ್ಷೇತ್ರಗಳಲ್ಲಿ ಮಧ್ವಾಚಾರ್ಯರು ಬ್ರಹ್ಮಸೂತ್ರದ ಬಗ್ಗೆ ಪ್ರಮಾಣಪುರಃಸರವಾಗಿ ನೂತನ ಮಾರ್ಗದಲ್ಲಿ ಪ್ರವಚನ ನೀಡಿದಾಗ, ಅಲ್ಲಿಯ ಪಂಡಿತೋತ್ತಮರಿಗೆ ಅದೊಂದು ಹೊಸ ಅನುಭವವೇ ಆಗಿತ್ತು. ಹಿಂದಿನ ಇಪ್ಪತ್ತೊಂದು ಭಾಷ್ಯಗಳಲ್ಲಿ ಯಾವುದನ್ನೂ ಹೋಲದ, ಮುಂದೆ ಆಚಾರ್ಯರು ಬರೆಯಲಿದ್ದ 'ಬ್ರಹ್ಮಸೂತ್ರಭಾಷ್ಯ'ದ ರೂಪರೇಷೆಗಳು ಆಗಲೇ ಹೊರಸೂಸುವಂತಿತ್ತು. ಅನಂತಶಯನದಲ್ಲಿ ಕುದಿಪುಸ್ತೂರು ಶಂಕರಾ-ಚಾರ್ಯರೆಂಬ ಅದ್ವೈತ ಯತಿಗಳನ್ನು ನಿರುತ್ತರಗೊಳಿಸಿದರು. ಉತ್ತರಭಾರತ ಯಾತ್ರೆಗೆ ಹೋಗುವ ಮುನ್ನ 'ಗೀತಾಭಾಷ್ಯ'ವನ್ನು ಬರೆದು ಅಚ್ಯುತಪ್ರೇಕ್ಷರಿಗೆ ಸಮರ್ಪಿಸಿದರು. ಅನಂತರ ವ್ಯಾಸಾಶ್ರಮ ವೀಕ್ಷಿಸಲು ಸ್ಫೂರ್ತಿಯುತ ಬೃಹತ್ ಭಾರತಯಾತ್ರೆಯನ್ನು ಕೈಗೊಂಡರು. ಹಿಮಾಲಯದ ಬದರೀನಾಥದಲ್ಲಿ ಒಬ್ಬಂಟಿಗರಾಗಿ ಕಠೋರ ವ್ರತವನ್ನು ಆಚರಿಸಿದ ಆಚಾರ್ಯರು ವೇದ

ವ್ಯಾಸರ ಮನೋಭೂಮಿಕೆಯನ್ನು ಅರಿತುಕೊಂಡ ಮೇಲೆಯೇ ಬ್ರಹ್ಮಸೂತ್ರಭಾಷ್ಯವನ್ನು ರಚಿಸಿದರು ಎಂಬ ಪ್ರಸಿದ್ಧಿಯಿದೆ.

ಹಿಮಾಲಯದ ಸಾನ್ನಿಧ್ಯದಲ್ಲೇ ತಮ್ಮ ನೂತನ ತತ್ತ್ವವಾದವನ್ನು ಕಂಡುಕೊಂಡ ಆಚಾರ್ಯರು ಬಿಹಾರ, ಬಂಗಾಳ, ಒರಿಸ್ಸ, ಆಂಧ್ರ ಮತ್ತು ಉತ್ತರ ಕರ್ನಾಟಕದ ಮೂಲಕವಾಗಿ ಉಡುಪಿ ಸೇರಿದರು. ಈ ಮಾರ್ಗದಲ್ಲಿ ನಾನಾ ವಿದ್ಯಾಕ್ಷೇತ್ರಗಳನ್ನು ಸಂದರ್ಶಿಸಿ ತಮ್ಮ ಅಲೌಕಿಕ ಪ್ರತಿಭೆಯನ್ನು ಪ್ರದರ್ಶಿಸಿದರು. ಶ್ರೀ ಕೂರ್ಮಶಾಸನದಲ್ಲಿ ಉಲ್ಲೇಖಿಸಲ್ಪಟ್ಟ, ಕಳಿಂಗದೇಶದ ಅಧಿಕಾರಿಗಳಾಗಿದ್ದ ನರಹರಿತೀರ್ಥರೂ ಹಾಗೂ ಗೋದಾವರೀತೀರದ ಪದ್ಮನಾಭತೀರ್ಥರೂ ಮಧ್ವರ ಶಿಷ್ಯರಾದರು. ಉಡುಪಿಗೆ ಬಂದ ಮೇಲೆ ಕೃಷ್ಣಮಠವನ್ನು ಸ್ಥಾಪಿಸುವ ಸಂದರ್ಭದಲ್ಲಿ ರೂಪುಗೊಂಡ ದ್ವಾದಶ ಸ್ತೋತ್ರ ಕನ್ನಡ ನಾಡಿನ ಹರಿದಾಸಪಂಥಕ್ಕೆ ಮೂಲ ಸ್ಫೂರ್ತಿ.

ಕೆಲವು ವರ್ಷಗಳನಂತರ ವೇದಾಂತ ಪ್ರಚಾರಕ್ಕಾಗಿಯೇ ಮಧ್ವಾಚಾರ್ಯರು ಎರಡನೆಯ ಬಾರಿ ಉತ್ತರ ಭಾರತಯಾತ್ರೆಯನ್ನು ಕೈಗೊಂಡರು. ಗಂಗಾನದಿಯ ಎದುರು ದಡದಲ್ಲಿ ಮುಸಲ್ಮಾನ ಸೈನ್ಯವು ನಿಂತಿದ್ದನ್ನೂ ಲಕ್ಷಿಸದೆ ಧೈರ್ಯದಿಂದ ನದಿಯಲ್ಲಿ ಈಜಿಕೊಂಡು, ಅಲ್ಲಿಯ ದೊರೆ ಬಲ್ಬನ್ ಸಾಹೇಬನನ್ನು (ಕ್ರಿ. ಶ. 1266) ಭೇಟಿ ಮಾಡಿ, ತಮ್ಮ ವೈದಿಕ ದೀಕ್ಷೆಯನ್ನು ಪರಿಶುದ್ಧ ಪರ್ಶಿಯನ್ ಭಾಷೆಯಲ್ಲಿಯೇ ಚಿತ್ರಮಯವಾಗಿ ವಿವರಿಸಿದ ಸುಂದರ ಪ್ರಸಂಗ 'ಮಧ್ವವಿಜಯ'ದಲ್ಲಿ ಬಂದಿದೆ— "....ತದ್ಭಾಷಯಾ ಚಿತ್ರವಾಕ್ಯಂ" ಮುಸಲ್ಮಾನ ದೊರೆಯು ಆಚಾರ್ಯರ ಗಾಂಭೀರ್ಯ, ವೀರ್ಯ, ಆರ್ಯಭಾವದ ತೇಜಸ್ಸುಗಳಿಗೆ ಮನಸೋತು ರಾಜ್ಯಾರ್ಧವನ್ನೇ ಕೊಡಲು ಸಿದ್ಧನಾದನಂತೆ! ಆದರೆ ಆಚಾರ್ಯರು

ನಿರಾಕರಿಸಿ ತಮ್ಮ ಉದ್ದೇಶಸಾಧನೆಗಾಗಿ ಉತ್ತರದ ಕಡೆ ಪ್ರಯಾಣ ಬೆಳೆಸಿದರು. ಬಲ್ಬನ್ ಸೂರ್ಯವಂಶಸ್ಥನೆಂದು ಹೇಳಿಕೊಳ್ಳುತ್ತಿದ್ದು ದರಿಂದ ಆ ಸೂರ್ಯನನ್ನೇ ಉದ್ದೇಶಿಸಿ, ಅಂತರ್ಯಾಮಿ ಯಾಗಿರುವ ವಿಶ್ವದೀಪನೂ ಸಕಲರಿಗೂ ಚೈತನ್ಯದಾಯಕನೂ ಆದ ನಾರಾಯಣನನ್ನು ಪ್ರತಿಪಾದಿಸಿದ ಮಧ್ವರ ಸಾಹಿತ್ಯ ಆನಂದ ದಾಯಕವು. ಅಂತರ ರಾಜ್ಯಕವನಗಳ ಮಧ್ಯೆ ಹರಿಸರ್ವೋತ್ತಮತ್ವ ವನ್ನೂ ಜಗತ್ಸತ್ಯತ್ವವನ್ನೂ ಎತ್ತಿ ಹಿಡಿದು ಕಾಲುನಡಿಗೆಯಲ್ಲಿಯೇ ಇಡೀ ಭರತಖಂಡವನ್ನು ಸಂಚರಿಸಿದ ಮಧ್ವರ ಅಚಲನಿಷ್ಠೆ ಊಹಾ ತೀತ. ಬದರಿಕಾಶ್ರಮವನ್ನು ಸೇರಿ, ಮಹಾಭಾರತದಲ್ಲಿ ಕಂಡು ಬರುವ ವಿವಿಧ ಪ್ರಸಂಗಗಳಿಗೆ ಸಮಂಜಸ ಉತ್ತರವನ್ನು ನೀಡಬಲ್ಲ "ಮಹಾಭಾರತ ತಾತ್ಪರ್ಯ ನಿರ್ಣಯ" ಎಂಬ ಸಂಶೋಧನಾತ್ಮಕ ಕೃತಿಯನ್ನು ರಚಿಸಿದರು. ಅಲ್ಲಿಂದ ಕುರುಕ್ಷೇತ್ರ, ವಾರಣಾಸಿ, ದ್ವಾರಕೆಗಳ ಮೂಲಕ ಗೋವಾ ರಾಜ್ಯಕ್ಕೆ ಬಂದರು. ಆನಂದ ತೀರ್ಥರು ವೀಣೆಯನ್ನು ಮಧುರವಾಗಿ ನುಡಿಸಿ, ಆ ಪ್ರದೇಶದ ಸಸ್ಯ ಸಂಪತ್ತನ್ನು ಫಲಗೊಳಿಸಿದರು ಎಂಬ ನಿರೂಪಣೆ 'ಮಧ್ವವಿಜಯ' ದಲ್ಲಿ ಬಂದಿದೆ. ಇಂದೂ ಪರ್ತಗಾಳಿಯಲ್ಲಿರುವ ಜೀವೋತ್ತಮ ಮಠವು ಮಧ್ವರಿಗೂ ಗೋವಾ ರಾಜ್ಯಕ್ಕೂ ಇದ್ದ ಸಂಬಂಧವನ್ನು ತೋರ್ಪಡಿಸುವ ಕುರುಹಾಗಿದೆ.

ಬಂಗಾಳದ ಕೃಷ್ಣಚೈತನ್ಯರು ಮಧ್ವರ ಭಕ್ತಿಪಂಥವನ್ನು ಅನು ಸರಿಸಿರುವುದರಿಂದ ಆ ಪರಂಪರೆಗೆ ಮೂಲಪುರುಷರಾದ ಮಧ್ವಾ-ಚಾರ್ಯರು ಬಂಗಾಳವನ್ನು ಸಂದರ್ಶಿಸಿರಲು ಸಾಧ್ಯವಿದೆ ಎಂದು ಸ್ವಾಮಿ ವಿವೇಕಾನಂದರು ಬರೆಯುತ್ತಾರೆ. ಹದಿಮೂರನೆಯ ಶತಮಾನವು ಕರ್ನಾಟಕ ಮತ್ತು ಭಾರತದ ರಾಜಕೀಯ ಚರಿತ್ರೆ

ಯಲ್ಲಿ ಅಶಾಂತಿಪರ್ವವಾದರೂ, ಮಧ್ವಾಚಾರ್ಯರಿಂದ ಪುರಸ್ಕೃತ ವಾದ ದ್ವೈತವೇದಾಂತವೂ ಭಾಗವತಧರ್ಮವೂ ವಿಷ್ಣು ಭಕ್ತಿಯೂ ಹದಿನೈದನೆಯ ಶತಮಾನದವರೆಗೆ ಉತ್ತರ ಭಾರತ ದಲ್ಲಿಯೂ ಬಂಗಾಳದಲ್ಲಿಯೂ ವಿಶೇಷವಾಗಿ ವ್ಯಾಪಿಸಿತು. ಮುಂದೆ ನರಹರಿತೀರ್ಥರೆಂಬ ಹೆಸರಿನಿಂದ ಆಚಾರ್ಯರ ಶಿಷ್ಯರಾದವರು ಕಲಿಂಗದೇಶಸ್ಥರು; ಅಂದರೆ ಈಗಿನ ಒರಿಸ್ಸಾರಾಜ್ಯದವರು. ಒರಿಸ್ಸಾಗೆ ಬರುವ ಮಾರ್ಗದಲ್ಲಿ ಮಧ್ವರು ಬಂಗಾಳದಲ್ಲಿ ಸಂಚರಿಸಿರಲು ಸಾಧ್ಯವಿದೆ. ಈ ಸ್ಫೂರ್ತಿಯಿಂದಲೇ ಅವರ ಶಿಷ್ಯಪರಂಪರೆಯಲ್ಲಿ ಅನೇಕರು ಬಂಗಾಳದಲ್ಲಿ ಆಗಿಂದಾಗ ಪ್ರವಾಸಮಾಡಿ ಮತ ಪ್ರಚಾರ ಮಾಡಿರಬೇಕು. ಜಯತೀರ್ಥರ ಪ್ರಶಿಷ್ಯ ರಾಜೇಂದ್ರ-ತೀರ್ಥರು, ಜಯಧ್ವಜತೀರ್ಥರು, ನಂತರ ವ್ಯಾಸರಾಯರು ಬಂಗಾಳದಲ್ಲಿ ಬಹುಮುಖ ಪ್ರತಿಭೆಯನ್ನು ಬೀರಿದ್ದಾರೆ.

"ಭಕ್ತಿ ರತ್ನಾವಲಿ" ಎಂಬ ಗ್ರಂಥವನ್ನು ರಚಿಸಿ, ಭಾಗವತ ಧರ್ಮವನ್ನು ಪ್ರಚುರಗೊಳಿಸಿದ ವಿಷ್ಣುಪುರಿ ಎಂಬುವವರು ಜಯಧ್ವಜರ ಶಿಷ್ಯರು. ಇವರ ಶಿಷ್ಯಪರಂಪರೆಯಲ್ಲಿ ಮಾಧವೇಂದ್ರ ಪುರಿಯು ಮಧ್ವಮತಾನುಯಾಯಿಗಳಾಗಿ ಭಕ್ತಿಮಾರ್ಗವನ್ನೂ ಕೃಷ್ಣಭಕ್ತಿಯನ್ನೂ ವಿಶೇಷವಾಗಿ ಪ್ರಸಾರಗೊಳಿಸಿದರು. ಸಂಕೀರ್ತನ ಸಂಪ್ರದಾಯ ಮಧ್ವರ ದ್ವಾದಶಸ್ತೋತ್ರದಿಂದಲೇ ಉಗಮ ವಾಯಿತೆನ್ನಬಹುದು. ರೂಪ ಮತ್ತು ಜೀವಾನಂದ ಎಂಬ ಚೈತನ್ಯ ಮತದ ಗ್ರಂಥಕರ್ತರು ತಮ್ಮ ವ್ಯಾಖ್ಯಾನಗಳಲ್ಲಿ ಮಧ್ವಾಚಾರ್ಯರ ಬ್ರಹ್ಮಸೂತ್ರಭಾಷ್ಯ, ಭಾಗವತತಾತ್ಪರ್ಯಗಳಿಂದ ಅನೇಕ ಭಾಗ ಗಳನ್ನು ಉದಾಹರಿಸಿ ತಮ್ಮ ಮತವನ್ನು ಸಮರ್ಥಿಸಿದ್ದಾರೆ.

ಒಮ್ಮೆ ಮಧ್ವರ ಅಮೂಲ್ಯ ಪುಸ್ತಕಭಂಡಾರ ಕಳುವಾಯಿ

ತೆಂದೂ, ಆಗ ಪೂರ್ಣಪ್ರಜ್ಞರೆನಿಸಿದ್ದ ಆಚಾರ್ಯರ ಕೀರ್ತಿ ಮತ್ತಷ್ಟು ಹೆಚ್ಚಿತೆಂದೂ, ತುಂಬಳಯ ದೊರೆ ಜಯಸಿಂಹನ ಪ್ರಯತ್ನದಿಂದ ಮತ್ತೆ ಅದು ದೊರಕಿತೆಂದೂ, ಅವನ ಆಸ್ಥಾನ ದಲ್ಲಿದ್ದ ಪ್ರಖ್ಯಾತ ಕವಿಗಳೂ, ತರ್ಕಕೇಸರಿಯೂ, ಅದ್ವೈತವೇದಾಂತ ನಿಷ್ಠರೂ ಎನಿಸಿದ್ದ ತ್ರಿವಿಕ್ರಮಪಂಡಿತರಿಗೂ ಮಧ್ವಾಚಾರ್ಯ ರಿಗೂ ಹದಿನೈದು ದಿವಸಗಳ ವಿಪುಲ ಚರ್ಚೆ ನಡೆದು, ತ್ರಿವಿಕ್ರಮ ಪಂಡಿತರು ಆಚಾರ್ಯರ ವಿಶ್ವತೋಮುಖವಾದ ಪಾಂಡಿತ್ಯಕ್ಕೂ ತತ್ತ್ವವಾದದ ಶ್ರೇಷ್ಠತೆಗೂ ಮನಸೋತು ಶಿಷ್ಯತ್ವವನ್ನು ಅಂಗೀಕರಿ ಸಿದರೆಂದು 'ಮಧ್ವವಿಜಯ'ದಿಂದ ತಿಳಿದುಬರುತ್ತದೆ. ತ್ರಿವಿಕ್ರಮ ಪಂಡಿತರ ಮಕ್ಕಳೇ "ಮಧ್ವವಿಜಯ' ಕಾವ್ಯವನ್ನು ರಚಿಸಿರುವ ನಾರಾಯಣಪಂಡಿತಾಚಾರ್ಯರು.

ಬಹುಮುಖ ಭಾರತವನ್ನು ಪ್ರತಿನಿಧಿಸುವಂತಹ ಆಚಾರ್ಯರ ಶಿಷ್ಯವರ್ಗದಲ್ಲಿ ಬೇರೆ ಬೇರೆ ರಾಜ್ಯಗಳಿಂದಲೇ ಬಂದಂಥ ಪದ್ಮನಾಭ ತೀರ್ಥರು, ನರಹರಿತೀರ್ಥರು, ಮಾಧವತೀರ್ಥರು, ಅಕ್ಷೋಭ್ಯ ತೀರ್ಥರು ಮುಂತಾದವರಿದ್ದರು. ನಿರಂತರ ಉಡುಪಿ ಕೃಷ್ಣನ ಪೂಜೆಗೆ ಬಾಲಯತಿಗಳನ್ನು ನಿಯಮಿಸಿ ಅಷ್ಟಮಠಗಳ ಪರ್ಯಾಯ ವ್ಯವಸ್ಥೆಯಿಂದ ಕ್ರಮಬದ್ಧ ಭಕ್ತಿಯ ಸಾಂಘಿಕ ವಾತಾವರಣ ವನ್ನುಂಟುಮಾಡಿದರು.

ಉಡುಪಿಯ ಅನಂತೇಶ್ವರನ ಗುಡಿಯಲ್ಲಿ ಐತರೇಯ ಶ್ರುತಿ ಯನ್ನು ಪಾಠ ಹೇಳುತ್ತಾ ತಮ್ಮ ದಿವ್ಯ ಸಂದೇಶವನ್ನು ನೀಡಿ ಮಧ್ವಾಚಾರ್ಯರು ಈಶ್ವರ ಸಂವತ್ಸರದ ಮಾಘ ಶುದ್ಧ ನವಮಿಯ ದಿನ (1318) ರಂದು ಅದೃಶ್ಯರಾದರು. ಇವರನ್ನು ಪರಮಗುರು ಗಳೆಂದು ಅತ್ಯಂತ ವಿನಯದಿಂದ ಸ್ಮರಿಸಿ, ಇವರ ಶಾಸ್ತ್ರದ ಏಕ-

ವಾಕ್ಯತೆಯನ್ನು ದೀಕ್ಷಾಬದ್ಧವಾಗಿ ಸಂರಕ್ಷಿಸಿರುವ ಜಯತೀರ್ಥರು, ವ್ಯಾಸರಾಯರು, ವಿಜಯೀಂದ್ರರು, ವಾದಿರಾಜರು, ರಾಘವೇಂದ್ರ ಸ್ವಾಮಿಗಳು, ಪುರಂದರದಾಸರು ಮುಂತಾದ ಮಹನೀಯರ ಪರಂಪರೆ ಕನ್ನಡನಾಡಿನಲ್ಲಿ ಭವ್ಯವಾದುದು.

ಹಿತಮಿತಶಬ್ದಗಳಿಂದ ಬಹ್ವರ್ಥವನ್ನು ಪ್ರಕಾಶಪಡಿಸುವ ಇವರ ಮೂವತ್ತೇಳು ಗ್ರಂಥಗಳು ಗಂಭೀರವಾಗಿವೆ. ಟೀಕಾ ಟಿಪ್ಪಣಿಗಳ ಸಹಾಯದಿಂದ ಒಳಹೊಕ್ಕು ನೋಡಿದಂತೆಲ್ಲಾ ಶ್ರುತಿ ಸ್ಮೃತಿ ಪುರಾಣ ಇತಿಹಾಸಗಳ ಹೃದಯವನ್ನೇ ನೋಡಿದಂಥ ಅನುಭವ ವಾಗುತ್ತದೆ.

ಪೂರ್ಣಪ್ರಜ್ಞದೃಷ್ಟಿ

ಮಧ್ವಾಚಾರ್ಯರ ಮೂವತ್ತೇಳು ಗ್ರಂಥಗಳೂ ಭಾರತೀಯ ವೈದಿಕ ವಾಙ್ಮಯದ ಪೂರ್ಣಪ್ರಜ್ಞದೃಷ್ಟಿಯನ್ನು ಪ್ರತಿಬಿಂಬಿಸುವುವು. ಬ್ರಹ್ಮಸೂತ್ರಭಾಷ್ಯ, ನ್ಯಾಯವಿವರಣ, ಅನುವ್ಯಾಖ್ಯಾನ ಅಣುಭಾಷ್ಯ ಎಂಬುದಾಗಿ ನಾಲ್ಕು ಬ್ರಹ್ಮಸೂತ್ರವ್ಯಾಖ್ಯಾನಗಳು; ಗೀತಾಭಾಷ್ಯ ಮತ್ತು ಗೀತಾತಾತ್ಪರ್ಯವೆಂಬ ಎರಡು ಭಗವದ್ಗೀತಾ ವ್ಯಾಖ್ಯಾನಗಳು; ಪ್ರಮಾಣಲಕ್ಷಣ, ಕಥಾಲಕ್ಷಣ, ಮಾಯಾವಾದ ಖಂಡನ, ಪ್ರಪಂಚಮಿಥ್ಯಾತ್ವಾನುಮಾನಖಂಡನ, ಉಪಾಧಿಖಂಡನ, ತತ್ತ್ವಸಂಖ್ಯಾನ, ತತ್ತ್ವವಿವೇಕ, ತತ್ತ್ವೋದ್ಯೋತ, ಕರ್ಮನಿರ್ಣಯ ಮತ್ತು ವಿಷ್ಣುತತ್ತ್ವನಿರ್ಣಯವೆಂಬ ಹತ್ತು ಪ್ರಕರಣ ಗ್ರಂಥಗಳು; ಋಗ್ಭಾಷ್ಯವೆಂಬ ಋಕ್ಸಂಹಿತಾ ವ್ಯಾಖ್ಯಾನವು; ದಶೋಪನಿಷದ್ಭಾಷ್ಯಗಳು; ಮಹಾಭಾರತ ತಾತ್ಪರ್ಯನಿರ್ಣಯ ಭಾಗವತ ತಾತ್ಪರ್ಯನಿರ್ಣಯವೆಂಬ

ಇತಿಹಾಸ ಪುರಾಣವ್ಯಾಖ್ಯಾನಗಳು; ಜಯಂತೀನಿರ್ಣಯ, ಕೃಷ್ಣಾಮೃತ ಮಹಾರ್ಣವ, ಸದಾಚಾರಸ್ಮೃತಿ, ಯತಿಪ್ರಣವಕಲ್ಪ ಎಂಬ ಧರ್ಮಶಾಸ್ತ್ರ ಗ್ರಂಥಗಳು; ದ್ವಾದಶಸ್ತೋತ್ರ, ನೃಸಿಂಹ-ನಖಸ್ತುತಿ, ಯಮಕ ಭಾರತವೆಂಬ ಸ್ತೋತ್ರಸಾಹಿತ್ಯ ಹಾಗೂ ತಂತ್ರಸಾರವೆಂಬ ಆಹ್ನಿಕ, ಆಲಯನಿರ್ಮಾಣ, ವಿಗ್ರಹಪ್ರತಿಷ್ಠಾ ಮುಂತಾದ ವಿಷಯಗಳನ್ನೊಳಗೊಂಡ ಆಗಮಗ್ರಂಥವು—ಇವು ಆಚಾರ್ಯರ ಗ್ರಂಥರತ್ನಗಳು.

"ವಿಷ್ಣು ಸರ್ವೋತ್ತಮನು. ಇಡೀ ವೈದಿಕವಾಙ್ಮಯಕ್ಕೆ ಮುಖ್ಯ ತಾತ್ಪರ್ಯವಿರುವುದು ಸಕಲ ಗುಣಪೂರ್ಣನೂ ದೋಷದೂರನೂ ಆಗಿರುವಂಥ ವಿಷ್ಣುವೆಂಬ ಪರಮಾತ್ಮನಲ್ಲಿ. ಈ ಜಗತ್ತು ಸತ್ಯವು. ಚೇತನ, ಅಚೇತನ, ಈಶ್ವರ ಇವುಗಳಿಗೆ ಭೇದವು ಪಾರಮಾರ್ಥಿಕವು. ಚೇತನಾಚೇತನಾತ್ಮಕವಾದ ಪ್ರಪಂಚವು ಪರಮಾತ್ಮನ ಅಧೀನವು ಮತ್ತು ತಾರತಮ್ಯವುಳ್ಳದ್ದು. ಜೀವನಸ್ವರೂಪಭೂತವಾದ ಸುಖವನ್ನು ಅನುಭವಿಸುವುದೇ ಮೋಕ್ಷವು. ಅದಕ್ಕೆ ನಿರ್ಮಲ ಭಕ್ತಿಯೇ ಸಾಧನ. ಪ್ರತ್ಯಕ್ಷ ಅನುಮಾನ ಮತ್ತು ಆಗಮವೆಂಬ ಮೂರು ಪರಮ ಪ್ರಮಾಣವು. ಸಮಸ್ತ ದೇವತೆಗಳ ಹೆಸರುಗಳೂ ಮುಖ್ಯವೃತ್ತಿಯಿಂದ ನಾರಾಯಣನನ್ನೇ ಬೋಧಿಸುವುವು. ಸರ್ವ ಜಗತ್ತಿಗೂ ನಿಮಿತ್ತಕಾರಣನಾದ ಇವನಿಂದಲೇ ಸೃಷ್ಟಿ, ಸ್ಥಿತಿ, ಸಂಹಾರ, ನಿಯಮನ, ಜ್ಞಾನ, ಅಜ್ಞಾನ, ಬಂಧ ಹಾಗೂ ಮೋಕ್ಷ. ದೇಶಕಾಲಗಳಲ್ಲಿ ವ್ಯಾಪ್ತನೂ ಜ್ಞಾನಾನಂದಾತ್ಮಕ ಶರೀರವುಳ್ಳವನೂ ಆದ ಪರಮಾತ್ಮನು ಸಮಸ್ತ ಪ್ರಪಂಚಕ್ಕೂ ಅಂತರ್ಯಾಮಿಯಾಗಿರುವನು. ಜೀವೇಶ್ವರ ಭೇದ, ಜೀವ ಜಡ ಭೇದ, ಜೀವಜೀವರಲ್ಲಿ ಪರಸ್ಪರ ಭೇದ, ಜಡ ಜಡ ಪದಾರ್ಥಗಳಿಗೂ ಈಶ್ವರನಿಗೂ ಭೇದ,

ಈ ಪಂಚ ಭೇದಗಳು ಮಿಥ್ಯೆಯಲ್ಲ. ಜೀವೇಶ್ವರರ ಭೇದ ಹಾಗೂ ಜೀವರುಗಳ ಪರಸ್ಪರ ಭೇದವು ಸಂಸಾರದಲ್ಲಿಯೂ ಮುಕ್ತಿಯ ಲ್ಲಿಯೂ ಕೂಡ ಇರತಕ್ಕದ್ದು. ತ್ರಿವಿಧಜೀವರಲ್ಲಿ ನೀಚೋಚ್ಚಭಾವ ವಿದೆ. ಮುಕ್ತಜೀವರು ಅವರವರ ಸ್ವರೂಪಭೂತವಾದ ಪರಿಚ್ಛಿನ್ನ ಆನಂದವನ್ನೇ ಅನುಭವಿಸುವರು. ಬ್ರಹ್ಮನ ಆನಂದವು ಅಪರಿಚ್ಛಿನ್ನ ವಾಗಿರುವುದರಿಂದ ಅದಕ್ಕೆ ಸಮನಾದ ಅಥವಾ ಅಧಿಕವಾದ ಆನಂದವು ಅಪ್ರಾಮಾಣಿಕವು. ಪರಮಾತ್ಮನ ಪರಮಾನುಗ್ರಹ ದಿಂದಲೇ ಮುಕ್ತಿಯು. ಪರಮಾತ್ಮನಿಗೂ ಸಕಲ ಚೇತನವಸ್ತು ಗಳಿಗೂ ಬಿಂಬ ಪ್ರತಿಬಿಂಬ ಭಾವವು. 'ವಿಶೇಷ'ವೆಂಬ ಪ್ರಭಾವ ಶಾಲಿಯಾದ ಪದಾರ್ಥವು ಭೇದಪ್ರತಿನಿಧಿಯಾಗಿ ಅಭಿನ್ನ ವಸ್ತು ಗಳಲ್ಲಿದ್ದು, ಭೇದವ್ಯವಹಾರ ನಿರ್ವಾಹಕವಾಗಿರುವುದು...." ಇತ್ಯಾದಿ ಯುಕ್ತಾಯುಕ್ತ ವಿಮರ್ಶಪೂರ್ವಕ ಮಧ್ವಸಿದ್ಧಾಂತವು ಶ್ರುತಿ, ಸ್ಮೃತಿ, ಪುರಾಣೇತಿಹಾಸಗಳ ಹಿನ್ನೆಲೆಯಲ್ಲಿ ಸಾಗಿದೆ. ತತ್ತ್ವ ವಾದದ ವೈಖರಿಯಿಂದ ವೈದಿಕ ಹಾಗೂ ಲೌಕಿಕ ಮಾರ್ಗ ದಲ್ಲಿ ಸ್ಫೂರ್ತಿದಾಯಕವಾಗಿರುವ ಇವರ ಸಿದ್ಧಾಂತದಲ್ಲಿ ಲೋಕಾನು ಗ್ರಹದ ಅನೇಕ ಅಂಶಗಳನ್ನು ಮೇಲಿಂದ ಮೇಲೆ ಅರಿಯಬಹುದು.

ವಿಷ್ಣು ಸರ್ವೋತ್ತಮತ್ವವು ಕಲ್ಪನೆಯಲ್ಲ; ವೇದಗಳೂ ರಾಮಾ ಯಣವೂ ಪುರಾಣವೂ ಮಹಾಭಾರತವೂ ಆದ್ಯಂತವಾಗಿ ಕೀರ್ತಿ ಸಿರುವಂಥ ಪರಮ ತತ್ತ್ವವಿದು.

"ವೇದೇ ರಾಮಾಯಣೇ ಚೈವ ಪುರಾಣೇ ಭಾರತೇ ತಥಾ ।
ಆದಾವಂತೇ ಚ ಮಧ್ಯೇ ಚ ವಿಷ್ಣುಃ ಸರ್ವತ್ರ ಗೀಯತೇ ॥"

—(ಹರಿವಂಶ)

ಶೈವಪುರಾಣಗಳನ್ನೂ ವೈಷ್ಣವ ಪುರಾಣಗಳನ್ನೂ ಕೂಲಂಕಷ

ವಾಗಿ ವಿಮರ್ಶಿಸಿ ಸಕಲ ದೋಷಕ್ಕೂ ದೂರವಾದ ಪರಮಾತ್ಮ ನೆಂದರೆ ವಿಷ್ಣುವೊಬ್ಬನೇ ಎಂದು ನಿರ್ಧರಿಸಿ, ಇತರ ದೇವತೆಗಳಿಗೆ ಪರಮಾತ್ಮನಿಂದ ಕೊಡಲ್ಪಟ್ಟ ಸ್ಥಾನಮಾನಗಳನ್ನು ಗಣಿತಶಾಸ್ತ್ರಜ್ಞ ರಂತೆ ವಿಸ್ತಾರವಾಗಿ ವ್ಯಾಖ್ಯಾನಿಸಿದ್ದಾರೆ ಮಧ್ವಾಚಾರ್ಯರು. ಬ್ರಹ್ಮ ಮೀಮಾಂಸೆಗೆ ಮುಂಚೆ ರಚಿತವಾದ ದೈವೀ ಮೀಮಾಂಸದಲ್ಲಿ ವೇದವ್ಯಾಸರೇ ಘೋಷಿಸಿರುವ 'ಸ ವಿಷ್ಣುರಾಹ ಹಿ । ತಂ ಬ್ರಹ್ಮೇ-ತ್ಯಾಚಕ್ಷತೇ ತಂ ಬ್ರಹ್ಮೇತ್ಯಾಚಕ್ಷತೇ' ಎಂಬ ವಾಕ್ಯವನ್ನು ವೈಷ್ಣವ ಸಂಪ್ರದಾಯದ ಮೂಲಮಂತ್ರವಾಗಿ ಗ್ರಹಿಸಿದ ಆಚಾರ್ಯರು ಹೇಳುತ್ತಾರೆ:—

"ಸ್ವಯಂ ಭಗವತಾ ವಿಷ್ಣು ಬ್ರಹ್ಮೇತ್ಯೇತತ್ಪುರೋದಿತಮ್ ।
ಸ ವಿಷ್ಣುರಾಹ ಹೀತ್ಯಂತೇ ದೇವಶಾಸ್ತ್ರಸ್ಯ ದರ್ಶನಾತ್"

—(ಅನುವ್ಯಾಖ್ಯಾನ)

ಇನ್ನು ಬ್ರಹ್ಮಶಬ್ದವು ವಿಷ್ಣುವಿಗೆ ಅನ್ವಯವಾದ ಮೇಲೆ, ಬ್ರಹ್ಮ ಸೂತ್ರವ್ಯಾಖ್ಯಾನದಲ್ಲಿ "ಬ್ರಹ್ಮಶಬ್ದಶ್ಚ ವಿಷ್ಣಾವೇವ" ಎಂಬ ಅದ್ಭುತ ವಿಚಾರಸರಣಿ ಆಚಾರ್ಯರಿಂದ ಪ್ರತಿಪಾದಿಸಲ್ಪಟ್ಟಿದೆ.

ಈ ಜಗತ್ತಿನ ಸೃಷ್ಟಿಯ ಉದ್ದೇಶವೇನು ? ಜಗತ್ತು ಹೀಗೆಯೇ ಏಕೆ ಆಗಿದೆ ?-ಎಂಬ ಪ್ರಶ್ನೆಗೆ ಮಾಯಾವಾದದ ಅಥವಾ ಅದ್ವೈತ ವಾದದ ಕಾಲ್ಪನಿಕ ಪ್ರಪಂಚದಲ್ಲಿ ಉತ್ತರ ಸಿಗಲಾರದು. ಜಗತ್ತಿಗೆ ಮೂಲವಸ್ತುವಾದ ಪ್ರಕೃತಿಯು ಅನಾದಿ; ಜೀವವರ್ಗವೂ ಪ್ರಪಂಚವೂ ಪರಮಾತ್ಮನ ಶರೀರವೆಂದು ಹೇಳುವ ವಿಶಿಷ್ಟಾದ್ವೈತ ವಾದ ಅಷ್ಟು ಸಮರ್ಪಕವಾಗಿಲ್ಲ. ಇವೆಲ್ಲಕ್ಕೂ ಸರಿಯಾದ ಉತ್ತರ ದೊರಕುವುದು ಮಧ್ವಸಿದ್ಧಾಂತದಲ್ಲೇ. ಹಾಗೆಯೇ ವ್ಯವಹಾರ್ಯ ತತ್ತ್ವಜ್ಞಾನವಿರುವುದೂ ಇಲ್ಲಿಯೇ ಎಂದು ಜಿಜ್ಞಾಸುಗಳು ಗಮನಿಸುತ್ತಾರೆ.

ವಿವಿಧ ಆಕಾರದ ಪಾತ್ರೆಗಳಲ್ಲಿ ತುಂಬಿರುವ ನೀರಿನಲ್ಲಿ ಅಂತರ ವಿದ್ದರೂ ಎಲ್ಲ ಪಾತ್ರೆಗಳೂ ಪೂರ್ಣವಿದ್ದಂತೆ, ಅವರವರ ಸ್ವರೂಪ ಯೋಗ್ಯತೆಯ ಪೂರ್ಣತ್ವವೇ ಮುಕ್ತಿಯೆನಿಸಿ ಮುಕ್ತಾತ್ಮರ ಆನಂದ ದಲ್ಲಿ ತಾರತಮ್ಯವಿದ್ದರೂ ತೃಪ್ತಿಕರ ತತ್ತ್ವವನ್ನು ಆಚಾರ್ಯರ ಸಿದ್ಧಾಂತದಲ್ಲಿ ಮಾತ್ರ ವಿವೇಚಿಸಬಹುದು.

ಮಧ್ವಾಚಾರ್ಯರು ಜೀವವರ್ಗವನ್ನು ಮೂರು ವಿಧವಾಗಿ ವಿಂಗಡಿಸಿದ್ದಾರೆ :—ಮುಕ್ತಿಯೋಗ್ಯರು, ತಮೋಯೋಗ್ಯರು, ನಿತ್ಯ ಸಂಸಾರಿಗಳು, ಮೂವರೂ ತಮ್ಮ ತಮ್ಮ ಯೋಗ್ಯತೆಯನ್ನು ಸಂಪಾದಿಸಿಕೊಳ್ಳಲು ನಿರತರಾಗಿರುತ್ತಾರೆ. ಮೊದಲನೆಯ ಮಾರ್ಗವು ಸಾತ್ವಿಕ ಮಾರ್ಗದಲ್ಲಿದ್ದು ಮುಕ್ತಿಯ ನಿತ್ಯಾನಂದವನ್ನು ಅನುಭವಿ ಸುವವರಾದರೆ, ಎರಡನೆಯ ವರ್ಗವು ಕರ್ಮಲೋಕಪ್ರಾಪ್ತಿಗೆ ಅಂದರೆ ನಿತ್ಯದುಃಖಾನುಭವಕ್ಕೆ ಹಾತೊರೆಯುತ್ತಾರೆ. ಇದೇನು ವಿಪರ್ಯಾಸ ? ತಮೋಯೋಗ್ಯರಿಗೆ ಮುಕ್ತಿಯೇ ಇಲ್ಲವೇ ? ಪ್ರಜಾ ಪ್ರಭುತ್ವಕ್ಕೆ ಹೊರತಾದ ಸಿದ್ಧಾಂತವಾಯಿತಲ್ಲ ! ಎನ್ನುವುದಾದರೆ ಸ್ವಲ್ಪ ಆಲೋಚಿಸುವುದು ಯೋಗ್ಯವೆನಿಸುತ್ತದೆ! ತಮೋಯೋಗ್ಯರು ಎಂದು ಒಂದು ವರ್ಗವನ್ನು ನಿಶ್ಚಯಿಸುವ ಅಧಿಕಾರ ನಮಗಿದೆಯೇ? ಅದು ಪರಮಾತ್ಮನ ವ್ಯಾಪ್ತಿಗೆ ಒಳಪಟ್ಟದ್ದಲ್ಲವೇ ನಮ್ಮ ಅನುಭವ ದಲ್ಲೇ ಇಂದು ಒಳ್ಳೆಯವರಾಗಿ ಕಂಡವರು ನಾಳೆ ಕೆಟ್ಟವರಾಗಿ ಪರಿಣಮಿಸುತ್ತಿರುವರಲ್ಲ ! ನಮ್ಮ ಸಾಮಾನ್ಯ ದೃಷ್ಟಿಗೇ ಇಷ್ಟು ಗೋಚರಿಸುವಾಗ ಪರಮಾತ್ಮನ ಸರ್ವತೋಮುಖವಾದ ಅವ ಲೋಕನದಲ್ಲಿ ಶಾಶ್ವತ ತಮೋಯೋಗ್ಯರು ಒಂದು ವರ್ಗವಾಗಿಯೇ ನಿಂತುಬಿಡುವುದು ಏಕೆ ಅಸಂಭವನೀಯ ? ಶಾಶ್ವತ ಸ್ವರ್ಗವಿರುವ ಹಾಗೆ ಶಾಶ್ವತ ನರಕವೂ ಇರಲಿಕ್ಕೆ ಸಾಧ್ಯ. ಇನ್ನು ನರಕದ ವರ್ಣನೆ

ಯಿಂದ ನಮಗೆ ಸ್ವಲ್ಪವಾದರೂ ಅಳುಕುಂಟಾಗುವುದಾದರೆ, ಸನ್ಮಾರ್ಗಕ್ಕೆ ತಿರುಗುವಂತಾದರೆ, ನಮ್ಮಲ್ಲಿ ಸಾತ್ವಿಕಾಂಶ ಬೆಳೆದಂತೆಯೇ ಎಂದು ತಿಳಿಯಬಹುದು. ಇದೇ ಮಧ್ವರ ಲೋಕಾನುಗ್ರಹ ದೃಷ್ಟಿ. ಇನ್ನು ಇಬ್ಬಗೆಯ ಜೀವನವನ್ನು ನಡೆಸುವವರ ಪಾಡು ನಿತ್ಯಸಂಸಾರಿಯ ಅವಸ್ಥೆಯು : ಪುನರಪಿ ಜನನಂ, ಪುನರಪಿ ಮರಣಂ.

ನಾರಾಯಣನ ಪರಮ ಪ್ರಸಾದವಿಲ್ಲದೆ ಮೋಕ್ಷಪ್ರಾಪ್ತಿಯಿಲ್ಲ. ಆ ಪ್ರಸಾದವು ಆತನ ಮಾಹಾತ್ಮ್ಯಜ್ಞಾನವಿಲ್ಲದೆ ಆಗುವಂತಿಲ್ಲ. ಆದ್ದರಿಂದ ಮುಮುಕ್ಷುವಿಗೆ ಬ್ರಹ್ಮಜಿಜ್ಞಾಸೆಯು ಅತ್ಯಾವಶ್ಯಕವು ಎಂದು ಆಚಾರ್ಯರು ಹೇಳುತ್ತಾರೆ :—

"ಯತೋ ನಾರಾಯಣಪ್ರಸಾದಮೃತೇ ನ ಮೋಕ್ಷಃ । ನ ಚ ಜ್ಞಾನಂ ವಿನಾ ಅತ್ಯರ್ಥಪ್ರಸಾದಃ । ಅತೋ ಬ್ರಹ್ಮಜಿಜ್ಞಾಸಾ ಕರ್ತವ್ಯಾ ॥"

—ಬ್ರಹ್ಮಸೂತ್ರಭಾಷ್ಯ

ಮಹಿಮೆಯ ಅರಿವಿನ ಮೂಲಕ ಮಿಕ್ಕೆಲ್ಲ ವಸ್ತುಗಳಿಗಿಂತ ಹೆಚ್ಚಾಗಿ ತೋರತಕ್ಕ ಸ್ನೇಹವೇ ಭಕ್ತಿಯು—

"ಮಾಹಾತ್ಮ್ಯಜ್ಞಾನಪೂರ್ವಸ್ತು ಸುದೃಢಸ್ಸರ್ವತೋಽಧಿಕಃ ।
ಸ್ನೇಹೋ ಭಕ್ತಿರಿತಿ ಪ್ರೋಕ್ತಃ ತಯಾ ಮುಕ್ತಿರ್ನಚಾನ್ಯಥಾ ॥"

—(ತಾತ್ಪರ್ಯನಿರ್ಣಯ)

ಇಂಥ ಸ್ನೇಹವಿಶೇಷವನ್ನು ಸರ್ವೋತ್ತಮನಾದ ಹರಿಯಲ್ಲಿ ಯಾರು ನಿರಂತರದಲ್ಲೂ ಪಡೆದಿರುವರೋ ಅವರೇ ಭಕ್ತರೆಂದೂ ಆ ಭಕ್ತಿಗೆ ಮೆಚ್ಚಿ ಪರಮಾತ್ಮನು ಅವರಿಗೆ ಮುಕ್ತಿಯನ್ನು ಕೊಡುವನೆಂದೂ ಆಚಾರ್ಯರು ಭಕ್ತಿಯ ರೂಪರೇಷೆಗಳನ್ನು ಬಿಡಿಸಿದ್ದಾರೆ.

ಮಧ್ವಾಚಾರ್ಯರ ಗ್ರಂಥಗಳನ್ನೋದುವಾಗ ಅಲ್ಲಲ್ಲೇ ಕಂಡು ಬರುವ ವಾಕ್ಯಸರಣಿಗಳು ಸಮಕಾಲೀನ ಸಾಮಾಜಿಕ ರಾಜಕೀಯ ಸಮಸ್ಯೆಗಳ ಮೇಲೆ ಉಪದೇಶರೂಪದಲ್ಲಿರುವುದನ್ನು ಕಾಣ ಬಹುದು :—

'ಗೀತಾತಾತ್ಪರ್ಯ'ದಲ್ಲಿ ಹೀಗೆ ಬರೆಯುತ್ತಾರೆ ;—

"ಸ್ವಾಭಾವಿಕೋ ಬ್ರಾಹ್ಮಣಾದಿಃ ಶಮಾದ್ಯೈದೇವ ಭಿದ್ಯತೇ |
ಯೋನಿಭೇದಕೃತೋ ಭೇದೋ ಜ್ಞೇಯ ಔಪಾಧಿಕಸ್ತ್ವಯಂ ||
ಅಧಿಕಾಶ್ಚೇತ್ ಗುಣಾಃ ಶೂದ್ರೇ ಬ್ರಾಹ್ಮಣಾದಿ ಸ ಉಚ್ಯತೇ |
ಬ್ರಾಹ್ಮಣೋऽಪ್ಯಲ್ಪಗುಣಕಃ ಶೂದ್ರ ಏವೇತಿ ಕೀರ್ತಿತಂ ||"

—ಜಾತಿವ್ಯವಸ್ಥೆಯಲ್ಲಿ ಎರಡು ವಿಧ. ಒಂದು ಸ್ವಾಭಾವಿಕವಾದದ್ದು. ಅಂದರೆ, ಶಮದಮಾದಿ ಗುಣಶೀಲದಿಂದಲೇ ನಿಂತಿರುವಂಥಾದ್ದು. ಮತ್ತೊಂದು ವಂಶಾನುಗತವಾಗಿ ಹುಟ್ಟಿನಿಂದ ಬಂದದ್ದು. ಶೂದ್ರನೊಬ್ಬನಲ್ಲಿ ಉದಾತ್ತಗುಣಗಳಿದ್ದರೆ ಅವನನ್ನು ಸ್ವಾಭಾವಿಕ ಬ್ರಾಹ್ಮಣ ಅಥವಾ ಕ್ಷತ್ರಿಯ ಎನ್ನಬಹುದು. ಕೀಳುಗುಣದ ಬ್ರಾಹ್ಮಣನು ಶೂದ್ರನೆಂದೇ ಕರೆಯಲ್ಪಡುತ್ತಾನೆ.

'ಕರ್ಮ' ಶಬ್ದದ ನಿಷ್ಪತ್ತಿಮಾಡುವಾಗ ಹೇಳುತ್ತಾರೆ :—

"ನಾನಾಜನಸ್ಯ ಶುಶ್ರೂಷಾ ಕರ್ಮಾಖ್ಯಾ ಕರವನ್ಮಿತೇಃ"

—ಪರಮಾತ್ಮನಿಗೆ ಪ್ರತಿಬಿಂಬ ಸ್ವರೂಪರಾಗಿರುವ ವಿವಿಧ ವರ್ಗದ ಜನರನ್ನು ಅವರವರ ಯೋಗ್ಯತೆಗೆ ತಕ್ಕಂತೆ ಸೇವಿಸುವುದೇ 'ಕರ್ಮ' ದ ಅರ್ಥ. ಇಡೀ ಬ್ರಹ್ಮಾಂಡಕ್ಕೆ ಸರ್ವೋತ್ತಮನಾಗಿರುವ ಪರಮಾತ್ಮನಿಗೆ ಈ ರಾಜ್ಯದ ನಾಗರಿಕರು ಸಲ್ಲಿಸುವ ತೆರಿಗೆಯೇ 'ಕರ್ಮ' ರೂಪವು.

ಕರ್ಮಕ್ಕೂ ಅದೃಷ್ಟಕ್ಕೂ ಗಂಟುಹಾಕಿ ಸತ್ತ್ವಹೀನರಾಗುವುದು ಸರಿಯಲ್ಲ; ಅತಿ ಪ್ರಯತ್ನದಿಂದಲೇ ಕರ್ಮದ ಜಾಡನ್ನು ಬದ

ಲಾಯಿಸಲು ಸಾಧ್ಯವಿದೆ. 'ಗೀತಾಭಾಷ್ಯ' ದಲ್ಲಿ ಹೇಳುತ್ತಾರೆ :—

"ಸಂಸ್ಕಾರೋ ಬಲವಾನೇವ ಬ್ರಹ್ಮಾದ್ಯಾ ಅಪಿ ತದ್ವಶಾಃ ।

ತಥಾಪಿ ಸೋಽನ್ಯಥಾಕರ್ತುಂ ಶಕ್ಯತೇ ಅತಿ ಪ್ರಯತ್ನತಃ" ॥

ಪ್ರಪಂಚವನ್ನೂ ಪರಮಾತ್ಮನನ್ನೂ ಸತ್ಯತ್ವದ ಒಂದೇ ತಕ್ಕಡಿಯಲ್ಲಿ ತೂಗಿ ನೋಡಿದ ಆಚಾರ್ಯರು ಪ್ರಪಂಚದ ವಿಸ್ತಾರವನ್ನು ಬಣ್ಣಿಸುತ್ತಾರೆ :—

"ಪ್ರಕೃಷ್ಟಃ ಪಂಚವಿಧೋ ಭೇದಃ ಪ್ರಪಂಚಃ"—(ತತ್ತ್ವನಿರ್ಣಯ)

ಬ್ರಹ್ಮಸೂತ್ರಭಾಷ್ಯದಲ್ಲಿ ತತ್ರಪ್ರಸಿದ್ಧ, ಅನ್ಯತ್ರ ಪ್ರಸಿದ್ಧ, ಉಭಯತ್ರ ಪ್ರಸಿದ್ಧ, ಅನ್ಯತ್ರೈವ ಪ್ರಸಿದ್ಧಗಳೆಂದು ವೈದಿಕ ಶಬ್ದಗಳನ್ನು ನಾಲ್ಕು ಪ್ರಕಾರವಾಗಿ ವಿಂಗಡಿಸಿ ಅವುಗಳನ್ನು ಪರಮಾತ್ಮನಲ್ಲಿ ಸಮನ್ವಯಗೊಳಿಸಿರುವ ಆಚಾರ್ಯರ ಅಸಾಧಾರಣ ಮಾರ್ಗವು ಭಾಷಾಶಾಸ್ತ್ರಜ್ಞರಿಗೆ ಅಪೂರ್ವ ಕೊಡುಗೆಯಾಗಿದೆ. ವೇದಕ್ಕೆ ಪ್ರಪ್ರಥಮ ಭಾಷ್ಯವನ್ನು ಬರೆಯುವಂಥ ಹೊಣೆಗಾರಿಕೆಯನ್ನು ಹೊತ್ತ ದಾರ್ಶನಿಕರಲ್ಲಿ ಮಧ್ವಾಚಾರ್ಯರೇ ಮೊದಲಿಗರು ; ಋಗ್ಭಾಷ್ಯದಲ್ಲಿ ಆಧಿಭೌತಿಕ, ಆಧಿದೈವಿಕ ಮತ್ತು ಆಧ್ಯಾತ್ಮಿಕವೆಂಬ ಮೂರು ಅರ್ಥಗಳನ್ನು ಸೂಕ್ತಗಳಿಗೆ ಅನ್ವಯಿಸಿರುವುದರಿಂದ ಆಧುನಿಕರ ವೈದಿಕ ಚರಿತ್ರೆಯ ವಿಭಾಗಗಳನ್ನು ಆಧ್ಯಾತ್ಮಿಕ ದೃಷ್ಟಿಯಿಂದ ಒಪ್ಪಲು ಅಸಾಧ್ಯವಾಗಿದೆ. ಮಹಾಭಾರತ ತಾತ್ಪರ್ಯನಿರ್ಣಯದಲ್ಲೂ ಆಚಾರ್ಯರು ಐತಿಹಾಸಿಕ, ಪರೋಕ್ಷ ಮತ್ತು ಆಧ್ಯಾತ್ಮಿಕರೂಪವಾದ ಮೂರು ಅರ್ಥಗಳನ್ನು ನಿರೂಪಿಸಿ, ಈ ಆಧ್ಯಾತ್ಮಕಾವ್ಯದಲ್ಲಿ ನಾರಾಯಣಕಥೆಯನ್ನೇ ದೃಷ್ಟಿಯಲ್ಲಿಟ್ಟುಕೊಂಡು ಸಮಸ್ತ ವೇದಾರ್ಥವನ್ನು ಮಥಿಸಿದ್ದಾರೆ. ದ್ವಾದಶಸ್ತೋತ್ರದಲ್ಲಿ ಆಚಾರ್ಯರ ಕಾವ್ಯಗಂಗೆ ಪದಾಗಮಗಳ ಸಾರವನ್ನೇ ಹಿಗ್ಗಿಸಿದೆ. ದ್ವೈತಾದ್ವೈತ

ವಿಚಾರದಲ್ಲಿ ವಿಷ್ಣುತತ್ತ್ವನಿರ್ಣಯ ಮುಂತಾದ ಪ್ರಕರಣ ಗ್ರಂಥಗಳು ವಾದವಿವಾದಾತ್ಮಕ ದಾರ್ಶನಿಕ ಸಾಹಿತ್ಯದಲ್ಲಿ ಅತ್ಯುನ್ನತ ಮಟ್ಟದಲ್ಲಿ ನಿಲ್ಲುವಂಥಾದ್ದು. ಇವುಗಳ ಸ್ಪಷ್ಟೀಕರಣಕ್ಕೆ ಬೆಳೆದಿರುವ ಟೀಕಾ ಟಿಪ್ಪಣಿಗಳು ಪೂರ್ಣಪ್ರಜ್ಞದೃಷ್ಟಿಯನ್ನು ವಿವರಿಸುವಂಥಾದ್ದೇ ಆಗಿವೆ.

ಪೂರ್ಣಪ್ರಜ್ಞರ ಆನಂದತೀರ್ಥದಲ್ಲಿ ನಲಿದಾಡಿದ ಪುರಂದರದಾಸರು ಹೇಳುತ್ತಾರೆ: "ಮಧ್ವಮತಾಬ್ಧಿಯಲಿ ಮೀನಾಗಿರಲಿ ಬೇಕು."

ಸಾಹಿತ್ಯವಾಹಿನಿ

೧. ಪುರಾಣಗಳು—ಡಾ॥ ಎನ್. ಎಸ್. ಅನಂತರಂಗಾಚಾರ್ಯ
೨. ಭರತನ ನಾಟ್ಯಶಾಸ್ತ್ರ—ಎಸ್. ಅನಂತನಾರಾಯಣ
೩. ರನ್ನ—ಎನ್. ಅನಂತರಂಗಾಚಾರ್
೪. ವೇಗ—ಜಿ. ಟಿ. ನಾರಾಯಣರಾವ್
೫. ಭೀಮಕವಿ—ಡಾ॥ ಎಚ್. ತಿಪ್ಪೇರುದ್ರಸ್ವಾಮಿ
೬. ಜಾತಿ ಮತ್ತು ಭಾರತ—ಜನಾರ್ದನ ಗುರ್ಕಾರ್
೭. ಕೆಂಪುನಾರಾಯಣ—ಎಚ್.ಎಂ. ಶಂಕರನಾರಾಯಣರಾವ್
೮. ಕರ್ಣಾಟಕ ಸಂಗೀತದ ಗೇಯ ರಚನೆಗಳು
—ಆರ್. ಎನ್. ದೊರೆಸ್ವಾಮಿ
೯. ಕನಕದಾಸರು—ಕೆ. ವೆಂಕಟರಾಮಪ್ಪ
೧೦. ಸೋದರಿ ನಿವೇದಿತಾ—ಡಾ॥ ಪ್ರಭುಶಂಕರ
೧೧. ಜ್ಯೋತಿಷ ಪ್ರವೇಶ—ಐ. ಶ್ರೀ. ಪ್ರಸಾದ
೧೨. ಶಂಕರಾಚಾರ್ಯರು—ಜಿ. ಹನುಮಂತರಾವ್
೧೩. ರಾಮಾನುಜಾಚಾರ್ಯರು—ಎಚ್ಚೆಸ್ಕೆ
೧೪. ಮಧ್ವಾಚಾರ್ಯರು—ಡಿ. ವಿ. ರಾಘವೇಂದ್ರ
೧೫. ಅನುಭವ ಮಂಟಪ—ಡಾ॥ ಎಚ್. ತಿಪ್ಪೇರುದ್ರಸ್ವಾಮಿ
೧೬. ಕರ್ಣಾಟಕದ ಶಾಸನಗಳು—ಎನ್. ಅನಂತರಂಗಾಚಾರ್
೧೭. ದುರ್ಗಸಿಂಹ—ಕೆ. ವೆಂಕಟರಾಮಪ್ಪ
೧೮. ಮಕ್ಕಳ ಮನಸ್ಸು—ಡಾ॥ ಎನ್. ಎಸ್. ವೀರಪ್ಪ
೧೯. ಚೌಂಡರಸ—ಕೆ. ಎಸ್. ಕೃಷ್ಣಮೂರ್ತಿ
೨೦. ಪೂರ್ವದ ಹಳಗನ್ನಡ—ಬಿ. ಎನ್. ಚಂದ್ರಯ್ಯ

ಪ್ರತಿಯೊಂದು ಪುಸ್ತಕದ ಬೆಲೆಯೂ ಐವತ್ತು ಪೈಸೆ

ಡಿ. ವಿ. ಕೆ. ಮೂರ್ತಿ : ಪ್ರಕಾಶಕರು : ಮೈಸೂರು-೪